ಸಂಪುಟ 01 | ಸಂಚಿಕೆ 182 | ಗುರುವಾರ 28 ಮೇ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE
ಸತ್ಯದ ದಿಕ್ಕು TRUE PATH
ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING
ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ
RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಬಕ್ರೀದ್ ಹಬ್ಬ**

ಮುಸ್ಲಿಂ ಧರ್ಮದ ಪ್ರಮುಖ ಹಬ್ಬವಾದ ಇದನ್ನು 'ತ್ಯಾಗದ ಹಬ್ಬ' ಎಂದೂ ಕರೆಯುತ್ತಾರೆ. ಅಲ್ಲಾಹನ ಆದೇಶದ ಮೇರೆಗೆ ಪ್ರವಾದಿ ಇಬ್ರಾಹಿಂ ತಮ್ಮ ಮಗನನ್ನು ಬಲಿ ನೀಡಲು ಮುಂದಾದ ತ್ಯಾಗದ ಸಂಕೇತವಾಗಿ ಈ ಹಬ್ಬವನ್ನು ಆಚರಿಸಲಾಗುತ್ತದೆ. ಈ ದಿನದಂದು ವಿಶೇಷ ಪ್ರಾರ್ಥನೆಗಳನ್ನು ಸಲ್ಲಿಸಿ, ಕುರ್‌ಬಾನಿ (ತ್ಯಾಗ) ಮಾಡಲಾಗುತ್ತದೆ.

**2) ಅಂತಾರಾಷ್ಟ್ರೀಯ ಮಹಿಳಾ ಆರೋಗ್ಯ ದಿನ**

ಪ್ರತಿ ವರ್ಷ ಮೇ 28 ರಂದು ಅಂತಾರಾಷ್ಟ್ರೀಯ ಮಹಿಳಾ ಆರೋಗ್ಯ ದಿನವನ್ನು (International Day of Action for Women's Health) ಆಚರಿಸಲಾಗುತ್ತದೆ. ಮಹಿಳೆಯರ ಶಾರೀರಿಕ ಮತ್ತು ಮಾನಸಿಕ ಆರೋಗ್ಯ, ಲೈಂಗಿಕ ಹಕ್ಕುಗಳು ಮತ್ತು ಸಂತಾನೋತ್ಪತ್ತಿ ಸ್ವಾತಂತ್ರ್ಯದ ಬಗ್ಗೆ ಜಾಗೃತಿ ಮೂಡಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ.

**3) ವಿಶ್ವ ಹಸಿವು ದಿನ**

ಪ್ರತಿ ವರ್ಷ ಮೇ 28 ರಂದು ವಿಶ್ವ ಹಸಿವು ದಿನವನ್ನು ಆಚರಿಸಲಾಗುತ್ತದೆ. ಜಾಗತಿಕ ಹಸಿವು ಮತ್ತು ಅಪೌಷ್ಟಿಕತೆಯ ಸಮಸ್ಯೆಯ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಅದಕ್ಕೆ ಶಾಶ್ವತ ಪರಿಹಾರಗಳನ್ನು ಕಂಡುಕೊಳ್ಳುವುದು ಇದರ ಮುಖ್ಯ ಉದ್ದೇಶವಾಗಿದೆ.

**4) ವೀರ ಸಾವರ್ಕರ ಜಯಂತಿ**

ಮಹಾರಾಷ್ಟ್ರದ ನಾಸಿಕ್‌ನಲ್ಲಿ ಮೇ 28 , 1883 ರಂದು ಜನಿಸಿದ ವಿ.ಡಿ. ಸಾವರ್ಕರ್ ( ಸ್ವಾತಂತ್ರ್ಯವೀರ ಸಾವರ್ಕರ್ ಎಂದೂ ಕರೆಯುತ್ತಾರೆ ) ಒಬ್ಬ ಸ್ವಾತಂತ್ರ್ಯ ಹೋರಾಟಗಾರ, ರಾಜಕಾರಣಿ, ವಕೀಲ, ಬರಹಗಾರ ಮತ್ತು ಸಮಾಜ ಸುಧಾರಕರಾಗಿದ್ದರು.

## ಸುಭಾಷಿತ

ಅನುಭವವು ಜಗತ್ತಿನ ಸರ್ವಶ್ರೇಷ್ಠ ಶಿಕ್ಷಕ. ಉಸಿರಿರುವವರೆಗೂ ಕಲಿಕೆ, ಜ್ಞಾನಾರ್ಜನೆಯೇ ಜೀವನದ ಗುರಿಯಾಗಿರಲಿ.

...ಸ್ವಾಮಿ ವಿವೇಕಾನಂದರು

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಸಿಎಂ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ಸಾಧ್ಯತೆ.!

❏ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಮೂರು ವರ್ಷಗಳಿಂದ ರಾಜ್ಯವನ್ನು ಆಳಿದ ಸಿದ್ದರಾಮಯ್ಯ ಆಳ್ವಿಕೆ ಇನ್ನೇನ್ನೂ ಅಂತ್ಯ ಕಾಲಕ್ಕೆ ಬಂದು ನಿಂತಿದ್ದು, ಗುರುವಾರ ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ಸಲ್ಲಿಸುವ ಸಾಧ್ಯತೆಯಿದೆ.**



### ನಾಯಕತ್ವ ಬದಲಾವಣೆ ನಂತರ ಮುಂದೇನು?

* ಸಿದ್ದರಾಮಯ್ಯ ಪದತ್ಯಾಗದ ಬೆನ್ನಲ್ಲೇ ಸಮಾಧಾನಕ್ಕೆ ಕ್ರಮ
* ದೆಹಲಿ ಅಂಗಳದಲ್ಲಿ ಸಿದ್ದರಾಮಯ್ಯ ಮಾತಿಗೆ ಬೆಲೆ ಕೊಡುವುದು
* ಯತೀಂದ್ರ ಸಿದ್ದರಾಮಯ್ಯಗೆ ಕ್ಯಾಬಿನೆಟ್ ದರ್ಜೆ ಸ್ಥಾನ ಕೊಡುವುದು
* ಸಿದ್ದರಾಮಯ್ಯ ಸೂಚಿಸಿದ ವ್ಯಕ್ತಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡುವುದು
* ಹೊಸ ಸಂಪುಟದಲ್ಲಿ ಸಿದ್ದರಾಮಯ್ಯ ಹೇಳಿದವರಿಗೆ ಸಚಿವ ಸ್ಥಾನ
* ಸಿದ್ದರಾಮಯ್ಯ ಬೆಂಬಲಿಗರಿಗೆ ಪ್ರಮುಖ ಹುದ್ದೆಗಳು, ಜವಾಬ್ದಾರಿ

ಗುರುವಾರ ಸಿದ್ದರಾಮಯ್ಯ ರಾಜೀನಾಮೆ ಸಲ್ಲಿಸಿದ್ರೆ, ಮರುದಿನ ಅಂದ್ರೆ ಶುಕ್ರವಾರ ಡಿಕೆ ಶಿವಕುಮಾರ್‌ಗೆ ಪಟ್ಟಾಭಿಷೇಕಕ್ಕೆ ಮುಹೂರ್ತ ಸಜ್ಜಾಗಿದೆ. ಇದೆಲ್ಲದರ ಬಗ್ಗೆ ಹೈಕಮಾಂಡ್ ನಾಯಕರು ಮತ್ತು ರಾಜ್ಯ ನಾಯರಕು ಇನ್ನಷ್ಟೇ ಅಧಿಕೃತವಾಗಿ ಘೋಷಿಸಬೇಕಿದೆ.

ದೆಹಲಿ ಹೈವೋಲ್ಟೇಜ್ ಸಭೆ ಬೆನ್ನಲ್ಲೇ ಸ್ಫೋಟಕ ಬೆಳವಣಿಗೆಗೆ ರಾಜ್ಯ ಕಾಂಗ್ರೆಸ್ ಸಾಕ್ಷಿಯಾಗಿದೆ. ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಸಾಧ್ಯತೆಯಿದ್ದು, ಈ ಸಭೆಯಲ್ಲಿ ಚರ್ಚಿಸಿ ಮಹತ್ವದ ನಿರ್ಣಯ ಕೈಗೊಳ್ಳುವುದೊಂದೇ ಬಾಕಿ ಉಳಿದಿದೆ. ಇಂದು ರಾಜ್ಯಕ್ಕೆ ಕೆ.ಸಿ ವೇಣುಗೋಪಾಲ್ ಹಾಗೂ ರಣದೀಪ್ ಸುರ್ಜೇವಾಲಾ ಆಗಮಿಸಲಿದ್ದು, ನಾಳೆ ಶಾಸಕಾಂಗ ಪಕ್ಷದ ಸಭೆ ಖಚಿತವಾಗಿದೆ. ಶಾಸಕರಿಗೆ ಸಿದ್ದರಾಮಯ್ಯ ಎಕ್ಸಿಟ್ ಬಗ್ಗೆ ಮನವರಿಕೆ ಮಾಡುವ ಸಾಧ್ಯತೆಯಿದೆ. ಡಿಕೆ ಶಿವಕುಮಾರ್ ಅವರನ್ನು ಶಾಸಕಾಂಗ ಪಕ್ಷದ ಹೊಸ ನಾಯಕನಾಗಿ ಆಯ್ಕೆ ಮಾಡುವುದೂ ಫಿಕ್ಸ್ ಆಗಿದೆ.

### ಸಿಎಂ ಬದಲಾವಣೆ ಕಾರಣಗಳೇನು?

* 2023 ಚುನಾವಣೆ ಬಳಿಕ 2.5 ವರ್ಷದ ಒಪ್ಪಂದ
* ಕೊಟ್ಟ ಮಾತಿನಂತೆ ಬದಲಾವಣೆ ಎಂಬ ಸಂದೇಶ
* 2028 ಚುನಾವಣೆ ದೃಷ್ಟಿ ಇಟ್ಟುಕೊಂಡು ಬದಲಾವಣೆ
* ಡಿಕೆಶಿಗೆ ಅಧಿಕಾರ ಕೊಡದಿದ್ರೆ ಒಕ್ಕಲಿಗರ ಮುನಿಸು ಆತಂಕ
* ರಾಜ್ಯದಲ್ಲಿ ಬಂಡಾಯ ಚಟುವಟಿಕೆ ನಡೆಯುವ ಭೀತಿ
* ಪಕ್ಷ ನಂಬಿದವರನ್ನ ಕೈ ಬಿಡಲ್ಲ ಎಂಬ ಸಂದೇಶದ ಉದ್ದೇಶ
* ಡಿಕೆಶಿ ಪಕ್ಷ, ಗಾಂಧಿ ಕುಟುಂಬ ಪರ ನಿಂತಿದ್ದಕ್ಕೆ ಜೈಲಿಗೆ ಹೋಗಿದ್ರು
* ಅಧಿಕಾರ ಕೊಡದೇ ಹೋದ್ರೆ ಡಿಕೆಶಿಗೆ ಮೋಸ ಮಾಡಿದ ಹಣೆಪಟ್ಟಿ
* ಡಿಕೆಶಿಗೆ ಅಧಿಕಾರ ಕೊಡದಿದ್ರೆ ಪಕ್ಷದಲ್ಲಿ ಭಿನ್ನಮತೀಯ ಚಟುವಟಿಕೆ
* ಡಿಕೆಶಿಗೆ ಪಟ್ಟ ಕಟ್ಟದಿದ್ರೆ ಕಾಂಗ್ರೆಸ್ ಪಕ್ಷಕ್ಕೆ ಡ್ಯಾಮೇಜ್ ಆಗುವ ಆತಂಕ

ಇಷ್ಟೆಲ್ಲ ಲೆಕ್ಕಾಚಾರಗಳನ್ನು ಹಾಕಿಕೊಂಡು ಹೈಕಮಾಂಡ್ ದಿಟ್ಟ ಹೆಜ್ಜೆ ಇಟ್ಟಿದೆ. ಇನ್ನು, ನಾಯಕತ್ವ ಬದಲಾವಣೆಯೇನೋ ಫಿಕ್ಸ್ ಆಗಿದೆ. ಆದರೆ, ಇದರಿಂದ ಎದುರಾಗುವ ಡ್ಯಾಮೇಜ್ ಕಂಟ್ರೋಲ್‌ಗೂ ದೆಹಲಿ ನಾಯಕರು ಪ್ಲಾನ್ ಮಾಡಿದ್ದಾರೆ.

ದೆಹಲಿಗೆ ಹೋದ ಮೇಲೆ ಡಿಸಿಎಂ ಡಿಕೆ ಶಿವಕುಮಾರ್ ಪ್ರತಿಯೊಂದು ಹೆಜ್ಜೆಯನ್ನು ಎಚ್ಚರಿಕೆಯಿಂದಲೇ ಇಟ್ಟಿದ್ದಾರೆ. ಎಚ್ಚರಿಕೆ ಮತ್ತು ಚಾಣಾಕ್ಷ ನಡೆ ಪ್ರದರ್ಶಿಸಿದ ಡಿಕೆ ಶಿವಕುಮಾರ್, ಎಲ್ಲೂ ಸಹ ತಮ್ಮ ಭಾವನೆಗಳನ್ನು ಬಹಿರಂಗವಾಗಿ ಪ್ರದರ್ಶಿಸಲಿಲ್ಲ. ಪ್ರಸ್ತುತ ಬೆಳವಣಿಗೆಯಿಂದ ತಮಗೆ ಸಂತೋಷ ಆಗಿದೆ. ಜಯ ಸಿಕ್ಕಿದೆ ಅಂತಾ ಎಲ್ಲಿಯೂ ಬಹಿರಂಗವಾಗಿ ತೋರಿಸಿಕೊಂಡಿಲ್ಲ. ಮಾಧ್ಯಮಗಳ ಜೊತೆಗೂ ನಾಜೂಕಿನ ನಡೆ ಪ್ರದರ್ಶಿಸಿದ್ದು, ಮಾತಾಡದೇ ಮೌನದಿಂದಲೇ ಕುರ್ಚಿ ಗಿಟ್ಟಿಸಿಕೊಂಡಿದ್ದಾರೆ.

ರಾಜ್ಯಸಭೆ ಚುನಾವಣೆಗೂ ಮೊದಲೇ ಸಿಎಂ ಬದಲಾವಣೆಗೆ ಹೈಕಮಾಂಡ್ ಮುಹೂರ್ತ ಇಟ್ಟಿದೆ. ಸಿಎಂ, ಡಿಸಿಎಂ ಇಬ್ಬರಿಗೂ ರಾಹುಲ್ ಗಾಂಧಿ ಈ ಬಗ್ಗೆ ಮೆಸೇಜ್ ಪಾಸ್ ಮಾಡಿದ್ದಾರೆ. ರಾಹುಲ್ ಮಾತು ಪಾಲಿಸಲು ಮುಂದಾದ ಸಿದ್ದರಾಮಯ್ಯ, ತಮ್ಮ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುವುದಕ್ಕೂ ಸೈ ಎಂದಿದ್ದಾರೆ. ಇದಕ್ಕೆ ಪ್ರತಿಯಾಗಿ ರಾಜ್ಯಸಭೆಗೆ ಸಿದ್ದರಾಮಯ್ಯರನ್ನು ಕರೆಸಿಕೊಳ್ಳುವ ಲೆಕ್ಕಾಚಾರದಲ್ಲಿ ಹೈಕಮಾಂಡ್ ನಾಯಕರು ಇದ್ದಾರೆ

## ಶ್ರೀ ಘನಮಠೇಶ್ವರ ಸೌಹಾರ್ದ ಸಹಕಾರಿಯಿಂದ ಶೈಕ್ಷಣಿಕ ಕಾರ್ಯ ಸಮಾಜಕ್ಕೆ ಮಾದರಿ :ಶ್ರೀ ಗುರುಬಸವ ಮಹಾಸ್ವಾಮಿಗಳು

❏ ನೈಜ್ಯ ದೆಸೆ ನ್ಯೂಸ್

**ಲಿಂಗಸುಗೂರು ಪಟ್ಟಣದಲ್ಲಿ ಸ್ಥಾಪಿತವಾದ ಶ್ರೀ ಘನಮಠೇಶ್ವರ ಸೌಹಾರ್ದ ಸಹಕಾರಿ ಸಂಘದಿಂದ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು.**

ಸಾನಿದ್ಯವನ್ನು ಶ್ರೀ ಮ ನಿ ಪ್ರ ಗುರುಬಸವ ಮಹಾಸ್ವಾಮಿಗಳು ಶ್ರೀ ಘನಮಠೇಶ್ವರ ಮಠ ಸಂತೇಕೆಲ್ಲೂರು ಪೂಜ್ಯರು ಮಾತನಾಡಿ ಇಂದಿನ ವಿದ್ಯಾರ್ಥಿಗಳು ಭವ್ಯ ಭಾರತದ ಬದಲಾವಣೆಯ ನಿರ್ಮಾತೃರು,- ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಯಲ್ಲಿ ಅತ್ಯುತ್ತಮ ಅಂಕ ಪಡೆದ ನೀವು, ಕಲಿತ ಶಾಲೆಗೆ,ನಿಮ್ಮ ಗ್ರಾಮಕ್ಕೆ ಕೀರ್ತಿ ತಂದಿದ್ದಿರಿ,ಮುಂದೆ ಕೂಡ ಉನ್ನತ ಹುದ್ದೆಹೊಂದಿ,ತಂದೆತಾಯಿಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕು,ಹಾಗೂ ಇಂದು ಶ್ರೀ



ಘನಮಠೇಶ್ವರ ಸೌಹಾರ್ದ ಸಹಕಾರ ವತಿಯಿಂದ ನಿಮನ್ನು ಗೌರವಿಸಿದ್ದು ಸಮಾಜಕ್ಕೆ ಆದರ್ಶತೆ ಮರೆದಿದ್ದಾರೆ,ಹೀಗೆ ಈ ಒಂದು ಸಹಕಾರಿ ಮುಂದೆ ನಿಮ್ಮ ಬ್ಯಾಂಕಿನ ವ್ಯವಹಾರ ಜೊತೆಗೆ ಸಾಮಾಜಿಕ ಕಳಕಳಿ ಕೆಲಸ ನಡೆಯಲಿ ಎಂದು ಶುಭ ಹಾರೈಸಿದರು.ನಂತರ ಮಾತನಾಡಿದ ಅಮರೇಗೌಡ ಮಾ.ಪಾ ಅವರು ವಿದ್ಯಾರ್ಥಿಗಳು ಅಕ್ಷರ ಜೊತೆಗೆ ಸಂಸ್ಕಾರ,ಸಂಸ್ಕೃತಿ , ಸಂಪ್ರದಾಯ ಬೆಳಸಿಕೊಳ್ಳಬೇಕು ಆಗ ಬೆಳವಣಿಗೆ ಸಾಧಿಸಲು ಸಾದ್ಯ,ಮುಖ್ಯವಾಗಿ ಗುರುಹಿರಿಯರಿಗೆ ಗೌರವಿಸುವ ಮೂಲಕ ನಿಮ್ಮ ವ್ಯಕ್ತಿತ್ವ ವಿಕಾಸನ ಮೈಗೂಡಿಸಿಕೊಳ್ಳಿ ಎಂದು ಹೇಳಿದರು. ಒಟ್ಟು ಹನ್ನೊಂದು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿ ಸನ್ಮಾನಿಸಲಾಯಿತು. ಅದ್ಯಕ್ಷತೆಯನ್ನು ಕರುಣಕುಮಾರ ಮಾ.ಪಾ ವಹಿಸಿದ್ದರು.ಉಪಾಧ್ಯಕ್ಷ ಗುಂಡಪ್ಪ ಕುಂಬಾರ , ಅತಿಥಿಗಳಾಗಿ ಅಶೋಕ ಬಿಜಾಪುರ ಯೋಗ ಅದ್ಯಕ್ಷರು,ರಾಮಕೃಷ್ಣ ಒಡೆಯರ,ಅಯ್ಯನಗೌಡ ಮಾ.ಪಾ,ಕಸ್ತೂರಿಪ್ಪ ಪಂಚಾಳ,ಚಂದನಗೌಡ ವಿರಪೂರ,ಶ್ರೀ ಮತಿ ಅಕ್ಕಮ್ಮ ಹಾಗೂ ಬ್ಯಾಂಕಿನ ಸಿಬ್ಬಂದಿಗಳಾದ ಅಪ್ಪಾಜಿಗೌಡ ಮಾ.ಪಾ,ತಿಮ್ಮನ್ನಗೌಡ ಕಡಬೂರು,ಬಸವಲಿಂಗಪ್ಪವಂದಲಿ,ಗೌತಮಗೌಡ ಮಾ.ಪಾ ಇದ್ದರು. ನಿರೂಪಣೆಯನ್ನು ಅಮರೇಶ ಪರಡ್ಡಿ ಶಿಕ್ಷಕರು ನೆರವೇರಿಸಿದರು.

## ಮುಧೋಳ್ ಭಾರತೀಯ ಜನತಾ ಪಾರ್ಟಿ ವತಿಯಿಂದ ಬೃಹತ್ ಪ್ರತಿಭಟನೆ

❏ ನೈಜ್ಯ ದೆಸೆ ನ್ಯೂಸ್

**ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನಲ್ಲಿ ನಗರಸಭೆಯ ಜನವಿರೋಧಿ ಧೋರಣೆ ವಿರುದ್ಧ ಭಾರತೀಯ ಜನತಾ ಪಾರ್ಟಿ ವತಿಯಿಂದ ಮುಧೋಳದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಯಿತು.**

27 ಮೇ 2026 ಕಳೆದ ಮೂರು ವರ್ಷಗಳಿಂದಲೂ ಸತತ ಯಾವುದು ಅಭಿವೃದ್ಧಿ ಆಗದ ಕಾರಣ ಭಾರತೀಯ ಜನತಾ ಪಾರ್ಟಿ ಹಾಗೂ ಮುಧೋಳದ ನಾಗರಿಕರು ಕೂಡಿ ಮುಧೋಳದಲ್ಲಿ ನಗರಸಭೆಯ ಬೇಜವಾಬ್ದಾರಿತನದ ಹಾಗೂ ಕಾರ್ಯಕಲಾಪಗಳು ಏನು ಆಗದೆ ಕಾರಣ ಇಂದು ಭಾರತೀಯ ಜನತಾ ಪಾರ್ಟಿಯ ಕಾರ್ಯಕರ್ತರ ಸಮ್ಮುಖದಲ್ಲಿ ಬೃಹತ್



ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಯಿತು ಈ ಪ್ರತಿಭಟನೆಯಲ್ಲಿ ಕರಿಬಸಯ್ಯ ಹಿರೇಮಠ ನಗರ ಮಂಡಳ ಅಧ್ಯಕ್ಷರು ಹಾಗೂ ಸಂಗಮೇಶ್ ಕಾತರಕಿ ಗ್ರಾಮೀಣ ಮಂಡಲ ಅಧ್ಯಕ್ಷರು ಹಾಗೂ ಹಿರಿಯ ಮುಖಂಡ ಅರುಣ್ ಕಾರಜೋಳ್ ಹಾಗೂ ಪಕ್ಷದ ಹಿರಿಯ ಮುಖಂಡರ ಸಮ್ಮೂಖದಲ್ಲಿ ಹಾಗೂ ಕಾರ್ಯಕರ್ತರು ಭಾಗವಹಿಸಿ ನಗರಸಭೆಗೆ ಮುತ್ತಿಗೆ ಹಾಕಿ ಆಡಳಿತ ಮಂಡಳಿಯಕ್ಕೆ ಎಚ್ಚರ ನೀಡಿದರು.

## ಮುಂಗಾರು ಬಿತ್ತನೆಗೆ ಮುನ್ನ ಗ್ರಾಮದೇವತೆ ಶ್ರೀ ದುರ್ಗಾದೇವಿಗೆ ಭಕ್ತಿಯಿಂದ ಉಡಿ ತುಂಬಿದ ಗ್ರಾಮಸ್ಥರು

❏ ನೈಜ್ಯ ದೆಸೆ ನ್ಯೂಸ್

**ಚಿಂಚರಿಕಿ: ಪ್ರಸಿದ್ಧ ಧಾರ್ಮಿಕ ಕೇಂದ್ರವಾದ ಚಿಂಚರಿಕಿ ಗ್ರಾಮದ ಆರಾಧ್ಯ ದೈವ ಶ್ರೀ ದುರ್ಗಾದೇವಿ ಗ್ರಾಮದೇವತೆಗೆ ದೈವದ ವತಿಯಿಂದ ಅತ್ಯಂತ ಭಕ್ತಿ-ಭಾವಗಳಿಂದ ಉಡಿ ತುಂಬುವ ಧಾರ್ಮಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.**

ಪ್ರಸಕ್ತ ಸಾಲಿನ ಮುಂಗಾರು ಬಿತ್ತನೆ ಕಾರ್ಯಕ್ಕೆ ಅಧಿಕೃತವಾಗಿ ಚಾಲನೆ ನೀಡುವ ಮುನ್ನ, ಮಳೆ-ಬೆಳೆ ಚನ್ನಾಗಿ ಆಗಲಿ ಹಾಗೂ ರೈತರಿಗೆ ಯಾವುದೇ ಸಂಕಷ್ಟ ಬಾರದಿರಲಿ ಎಂದು ಪ್ರಾರ್ಥಿಸಿ ಗ್ರಾಮದೇವತೆಗೆ ವಿಶೇಷ ಪೂಜೆ ಸಲ್ಲಿಸಿ, ಸಾಂಪ್ರದಾಯಿಕವಾಗಿ



ಉಡಿ ತುಂಬಲಾಯಿತು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯರು, ಮುಖಂಡರು ಹಾಗೂ ಅಪಾರ ಸಂಖ್ಯೆಯ ಸದ್ಭಕ್ತರು ಭಾಗವಹಿಸಿ ದೇವಿಯ ಕೃಪೆಗೆ ಪಾತ್ರರಾದರು. ಪ್ರತಿ ವರ್ಷದಂತೆ ಈ ವರ್ಷವೂ ಮುಂಗಾರು ಹಂಗಾಮು ಸುಖಕರವಾಗಿರಲಿ ಎಂದು ದೇವಿಯಲ್ಲಿ ಸಾಮೂಹಿಕವಾಗಿ ಪ್ರಾರ್ಥಿಸಲಾಯಿತು.

# ಮೇಕೆದಾಟು ಕುರಿತ ವಿಜಯ್ ಪತ್ರಕ್ಕೆ ವ್ಯಾಪಕ ಟೀಕೆ

❏ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ರಾಜಧಾನಿ ಬೆಂಗಳೂರು ಸೇರಿದಂತೆ ಸುತ್ತಮುತ್ತಲಿನ ನಗರಗಳಿಗೆ ಕುಡಿಯುವ ನೀರು ಪೂರೈಕೆ ಮಾಡುವ ಮೇಕೆದಾಟು ನದಿ ನೀರು ಯೋಜನೆಗೆ ಅನುಮತಿ ನೀಡಬಾರದೆಂದು ತಮಿಳುನಾಡು ಸಿಎಂ ಜೋಸೆಫ್ ವಿಜಯ್, ಪ್ರಧಾನಿ ನರೇಂದ್ರಮೋದಿ ಅವರಿಗೆ ಬರೆದಿರುವ ಪತ್ರಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿದೆ.**

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಎಮಿನೆಂಟ್ ಇಂಟಲೆಕ್ಚುಲ್ ಎಂಬುವರು ಪೋಸ್ಟ್ ಮಾಡಿ, ವಿಜಯ್ ಅವರ ಪತ್ರಕ್ಕೆ ತೀರಾ ಆಕ್ರೋಶ ವ್ಯಕ್ತಪಡಿಸಿದ್ದಾರೆ.ಪೋಸ್ಟ್‌ನಲ್ಲಿ ವಿಜಯ್ ಅವರಿಗೆ ಹಲವು ಪ್ರಶ್ನೆಗಳನ್ನು ಮಾಡಿರುವ ಅವರು, ಕರ್ನಾಟಕದಲ್ಲಿ ಯಾವ ಪಕ್ಷ ಅಧಿಕಾರದಲ್ಲಿದೆ? ತಮಿಳುನಾಡಿನಲ್ಲಿ ಯಾವ ಪಕ್ಷದ ಜೊತೆಗೆ ನೀವು ಮೈತ್ರಿ ಮಾಡಿಕೊಂಡು ಸರ್ಕಾರ ರಚನೆ ಮಾಡಿದ್ದೀರಿ? ಎಂದು ಖಾರವಾಗಿ ಪ್ರಶ್ನೆಸಿದ್ದಾರೆ. ಅವರು ಮಾಡಿರುವ ಪೋಸ್ಟ್ ನಲ್ಲಿ ಮೇಕೆದಾಟುನಲ್ಲಿ ಅಣೆಕಟ್ಟು ನಿರ್ಮಿಸುವವರು ಯಾರು? ಕರ್ನಾಟಕ. ಕರ್ನಾಟಕವನ್ನು ಯಾರು ಆಳುತ್ತಾರೆ? ಕಾಂಗ್ರೆಸ್ ವಿಜಯ್ ಅವರ ಆಡಳಿತ ಪಾಲುದಾರ ಯಾರು? ಕಾಂಗ್ರೆಸ್ ಎಂದು ಪ್ರಶ್ನೆಗಳ ವಾಗ್ಬಣ ಬಿಟ್ಟಿದ್ದಾರೆ.

ವಿಜಯ್ ಪ್ರಕಾರ ಯಾರ ನಿರ್ದೇಶನಗಳನ್ನು ಉಲ್ಲಂಘಿಸಲಾಗುತ್ತಿದೆ? ಸುಪ್ರೀಂ ಕೋರ್ಟ್.ಆದ-'ರೆ ಅದನ್ನು ಯಾರು ತಡೆಯಬೇಕು? ಮೋದಿ2 ಎಂದು ವ್ಯಂಗ್ಯಭರಿತವಾಗಿ ಪೋಸ್ಟ್ ಮಾಡಿದ್ದಾರೆ. ಕರ್ನಾಟಕದ ಬಹುನಿರೀಕ್ಷಿತ ಟಿಮೇಕೆದಾಟು ಸಮತೋಲನ ಜಲಾಶಯ ಮತ್ತು ಕುಡಿಯುವ ನೀರಿನ ಯೋಜನೆಟಿಯು ಮತ್ತೊಮ್ಮೆ ರಾಜಕೀಯ ಮತ್ತು ಕಾನೂನು ವಲಯದಲ್ಲಿ




ತೀವ್ರ ಚರ್ಚೆಯನ್ನು ಹುಟ್ಟುಹಾಕಿದೆ. ತಮಿಳುನಾಡಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿರುವ ವಿಜಯ್ ಅವರು, ಈ ಯೋಜನೆಯನ್ನು ತಡೆಯುವಂತೆ ಪ್ರಧಾನಿ ನರೇಂದ್ರ ಮೋದಿಯವರಿಗೆ ಪತ್ರ ಬರೆದಿರುವುದು ಹೊಸ ವಿವಾದಕ್ಕೆ ಕಾರಣವಾಗಿದೆ.

ಮೇಕೆದಾಟು ಯೋಜನೆಯು ಕಾವೇರಿ ನದಿ ನೀರು ಹಂಚಿಕೆ ಅಂತಿಮ ತೀರ್ಪಿನ ನಿಯಮಗಳಿಗೆ ವಿರುದ್ಧವಾಗಿದೆ ಎಂದು ಅವರು ಆರೋಪಿಸಿದ್ದಾರೆ. ಈ ಯೋಜನೆ ಜಾರಿಯಾದರೆ ತಮಿಳುನಾಡಿನ ರೈತರಿಗೆ ಮತ್ತು ಕಾವೇರಿ ನದಿ ಅವಲಂಬಿತ ಪ್ರದೇಶಗಳಿಗೆ ತೀವ್ರ ನೀರಿನ ಅಭಾವ ಉಂಟಾಗುತ್ತದೆ. ಆದ್ದರಿಂದ, ಕೇಂದ್ರ ಸರ್ಕಾರವು ಈ ಯೋಜನೆಗೆ ನೀಡಲಾದ ಯಾವುದೇ ಪ್ರಾಥಮಿಕ ಅನುಮತಿಗಳನ್ನು ತಕ್ಷಣವೇ ರದ್ದುಪಡಿಸಬೇಕು ಎಂದು ಮನವಿ ಮಾಡಿದ್ದಾರೆ.

ಕಾವೇರಿ ನದಿಯ ಕೆಳಭಾಗದ ರಾಜ್ಯವಾಗಿ ತಮಿಳುನಾಡಿನ ಹಕ್ಕುಗಳನ್ನು ರಕ್ಷಿಸುವುದು ಕೇಂದ್ರದ ಜವಾಬ್ದಾರಿ ಎಂದು ವಿಜಯ್ ತಮ ಪತ್ರದಲ್ಲಿ ವಿವರಿಸಿದ್ದಾರೆ. ನ್ಯಾಯಾಲಯದಲ್ಲಿ ಪ್ರಕರಣ ಬಾಕಿಯಿರುವಾಗ, ಪ್ರಧಾನಿಗೆ ಪತ್ರ ಬರೆಯುವ ಮೂಲಕ ರಾಜಕೀಯ ಒತ್ತಡ ಹೇರುವುದು ಸರಿಯಾದ ಕ್ರಮವಲ್ಲ. ಬದಲಾಗಿ, ರಾಜ್ಯಗಳ ನಡುವೆ ಮಾತುಕತೆಯ ಮೂಲಕ ಪರಿಹಾರ ಕಂಡುಕೊಳ್ಳಬೇಕು ಎಂಬುದು ಅವರ ವಾದ.

ಮೇಕೆದಾಟು ಯೋಜನೆ ಕೇವಲ ಕುಡಿಯುವ ನೀರಿಗಾಗಿ ರೂಪಿಸಲಾದ ಯೋಜನೆಯಾಗಿದ್ದು, ಇದರಿಂದ ನೆರೆಯ ರಾಜ್ಯಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ ಎಂದು ಕರ್ನಾಟಕ ಸರ್ಕಾರ ಪದೇಪದೇ ಸ್ಪಷ್ಟಪಡಿಸುತ್ತಿದೆ. ಪ್ರಧಾನಿ ಕಚೇರಿಯು ಈ ಪತ್ರವನ್ನು ಪರಿಶೀಲನೆಗೆ ತೆಗೆದುಕೊಂಡಿದೆಯೇ ಅಥವಾ ಇಲ್ಲವೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಆದಾಗ್ಯೂ, ವಿಜಯ್ ಅವರ ಈ ನಡೆ ಕಾವೇರಿ ನದಿ ಪಾತ್ರದ ರಾಜ್ಯಗಳಾದ ಕರ್ನಾಟಕ ಮತ್ತು ತಮಿಳುನಾಡಿನ ನಡುವೆ ಮತ್ತೆ ಸಂಘರ್ಷದ ವಾತಾವರಣವನ್ನು ಸೃಷ್ಟಿಸಿದೆ. ಮುಂದಿನ ದಿನಗಳಲ್ಲಿ ನ್ಯಾಯಾಲಯದ ತೀರ್ಪು ಮತ್ತು ಕೇಂದ್ರ ಸರ್ಕಾರದ ನಿಲುವಿನ ಮೇಲೆ ಈ ಯೋಜನೆಯ ಭವಿಷ್ಯ ನಿರ್ಧಾರವಾಗಲಿದೆ.

## ಸಾಹಿತ್ಯ ಸಿಂಚನ

### ನಗು

ನಗು ಎಂದರೆ ದೇವರ ವರ,
ಮನದ ನೋವಿಗೆ ಮಧುರ ಔಷಧಿಯ ಸರ.
ಒಂದು ನಗುವಿನಲ್ಲಿ ಪ್ರೀತಿ ಮಾತು,
ಜೀವನ ಸಾಗಿಸುವ ಸಿಹಿ ದಾರಿ ತಾತ್ಪರ್ಯವು.

ಮುಗುಳ್ನಗೆ ಮೂಡಿದ ಮುಖದಲ್ಲಿ,
ಚಂದ್ರನ ಹೊಳಪು ಕಾಣುತ್ತದೆ ಕಣ್ಣಿನಲ್ಲಿ.
ಕೋಪದ ಮೋಡ ಕಣ್ಮರೆಯಾಗುತ್ತದೆ,
ನಗುವಿನ ಸೂರ್ಯ ಉದಯವಾಗುತ್ತದೆ.

ಬಡವನಿಗೂ ನಗು ಆಸ್ತಿ,
ಧನವಂತರಿಗೂ ಅದೇ ಶಕ್ತಿ.
ಹಣದಿಂದ ಸಿಗದ ಸಂತೋಷ,
ನಗುವಿನಲ್ಲಿ ದೊರೆಯುವ ಅಮೂಲ್ಯ ಹರ್ಷ.

ನಗುತಿರೋ ಮನಸು ಹೂವಿನಂತೆ,
ಸ್ನೇಹ ಬೆಳೆಸುವ ಮಳೆಯಂತೆ.
ಒಂದು ನಗು ಕೊಡು ಜಗತ್ತಿಗೆ,
ಪ್ರೀತಿ ಮರಳಿ ಬರುತ್ತದೆ ಹೃದಯಕ್ಕೆ.


**ಕುಮಾರ್ ನಾಯಕ**

## ಮೂರೇ ದಿನದಲ್ಲಿ ಕಾರುಣ್ಯಾಶ್ರಮದಲ್ಲಿ ಏಳು ಜನ ನಿರಾಶ್ರಿತರಿಗೆ ಆಶ್ರಯ

**ನೈಜ್ಯ ದೆಸೆ ನ್ಯೂಸ್**

ಸಿಂಧನೂರು: ನಗರದ ವಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ) ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಕೇವಲ ಮೂರು ದಿನಗಳಲ್ಲಿ ಸಿಂಧನೂರು ಹಾಗೂ ಗ್ರಾಮಾಂತರ ಪ್ರದೇಶ ಮತ್ತು ಬಸ್ ನಿಲ್ದಾಣ ಗಳಲ್ಲಿ ವಾಸವಿದ್ದ ನಿರಾಶ್ರಿತರುಗಳನ್ನು ಕೆಲ ಅಧಿಕಾರಿಗಳ ಮಾಹಿತಿ ಹಾಗೂ ಸಾರ್ವಜನಿಕರ ಮಾಹಿತಿಯ ಮೇರೆಗೆ ತಾತ್ಕಾಲಿಕ ಆಶ್ರಯ ಕಲ್ಪಿಸಲಾಗಿದೆ.

ಈ ಸಂದರ್ಭದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ಸುಮಾರು ಮೂರು ದಿನಗಳ ಹಿಂದೆ ಸಿಂಧನೂರು ನಗರ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ವಾಸವಾಗಿದ್ದ ಹುಸೇನ್ ಬಿ. ವಯಸ್ಸು---68 ಹಾಗೂ ರುದ್ರೇಶ ರಾಯಚೂರು ವಯಸ್ಸು-62 ಇವರುಗಳನ್ನು ಬಸ್ ನಿಲ್ದಾಣದ ಕೆ. ಎಸ್. ಟಿ. ಅಧಿಕಾರಿಗಳ ಮಾಹಿತಿಯೊಂದಿಗೆ ಆಶ್ರಯ ಕಲ್ಪಿಸಲಾಗಿದೆ. ಹಾಗೂ ರಾಯಚೂ-ರಿನ ವಯಸ್ಕರ ಬುದ್ಧಿಮಾಂದ್ಯನಾದ ಹುಲುಗಪ್ಪ ವಯಸ್ಸು -29 ಹಾಗೂ ಗಂಗಾವತಿಯ ಮಹಾಂತೇಶ ವಯಸ್ಸು-78 ಹಾಗೂ ರಹೇಮಾನ್ ವಯಸ್ಸು-80 ಮಲ್ಲಪ್ಪ ವಯಸ್ಸು-45 ಮತ್ತು ಹೆಸರು ಹೇಳದ









ವಯಸ್ಕರ ಬುದ್ಧಿಮಾಂದ್ಯರೊಬ್ಬರನ್ನು ಆಶ್ರಮಕ್ಕೆ ಕರೆತೆಂದು ಮಾನವೀಯತೆಯ ದೃಷ್ಟಿಯಿಂದ ತಾತ್ಕಾಲಿಕ ಆಶ್ರಯ ಕಲ್ಪಿಸಲಾಗಿದೆ. ಆದ-'ಷ್ಟು ಇವರುಗಳ ಕುಟುಂಬವನ್ನು ಪತ್ತೆ ಹಚ್ಚಿ ಮತ್ತೆ ಅವರವರ ಮನೆಗೆ ಸೇರಿಸುವ ಪ್ರಯತ್ನ ಮಾಡುತ್ತೇವೆ. ಒಂದು ವೇಳೆ ಕುಟುಂಬದ ಮಾಹಿತಿ ಸಿಗದಿದ್ದ ಸಂದರ್ಭದಲ್ಲಿ ಅವ-ರಿಗೆ ಶಾಶ್ವತ ಆಶ್ರಯ ಕೊಡಲಾಗುವುದು.

ಇಂತಹ ಕಾರ್ಯಗಳು ಕಾರುಣ್ಯ ಆಶ್ರಮದ ಕರ್ತವ್ಯಗಳಾಗಿವೆ. ಯಾವುದೇ ಸರ್ಕಾರದ ಸಹಾಯವಿಲ್ಲದೆ ನಿರಂತರ ನಮ್ಮ ಜೋಳಿಗೆಯ ಮೂಲಕ ಈ ಕಾರ್ಯ ಮಾಡುತ್ತಿದ್ದೇವೆ. ದಾನಿಗಳೇ ನಮ್ಮ ನಿಜವಾದ ದೇವರುಗಳಾಗಿ ಹಲವಾರು ಅಂಧ -ಅನಾಥರ ಬಾಳಿಗೆ ಬದುಕು ಕಟ್ಟಿಕೊಟ್ಟಿದ್ದಾರೆ. ಇಂತಹ ಪುಣ್ಯಕಾರ್ಯಗಳಿಗೆ ಒಳಬಳ್ಳಾರಿಯ ಡಾ. ಸಿದ್ದಲಿಂಗ ಮಹಾಸ್ವಾಮಿಗಳು ಹಾಗೂ ಯದ್ದಲದೊಡ್ಡಿಯ ಮಹಾಲಿಂಗ ಮಹಾಸ್ವಾಮಿಗಳು ಇವರುಗಳ ನಿರಂತರ ಮಾರ್ಗದರ್ಶನದೊಂದಿಗೆ ಈ ಸೊಸೆ ಸಮಾಜಕ್ಕೆ ಅರ್ಪಿತವಾಗುತ್ತಿದೆ. ಈ ಕಾರುಣ್ಯ ಆಶ್ರಮಕ್ಕೆ ಸಹಾಯ ಸಹಕಾರ ಮಾಡುವವ-ರಿದ್ದರೆ ನೇರವಾಗಿ ಆಶ್ರಮಕ್ಕೆ ಒಮ್ಮೆ ಭೇಟಿ ನೀಡಿ ವಾಸ್ತವ ಸ್ಥಿತಿಯನ್ನು ನೋಡಿ ತಾವು ಸಹಾಯ ಮಾಡಬಹುದು ಆಶ್ರಮದ ಹೆಸರು ಹೇಳಿಕೊಂಡು ಯಾರಾದರೂ ತಮ್ಮಲ್ಲಿ ಸಹಾಯ ಸಹಕಾರ ಕೇಳಿದರೆ ಆಶ್ರಮದ ಕಾರ್ಯಾಧ್ಯಕ್ಷರಾದ ನನ್ನನ್ನು ಸಂಪರ್ಕಿಸಿರಿ ಈ ಸಂಸ್ಥೆ ಹುಟ್ಟಿದಾಗಿನಿಂದಲೂ ಸಹ ನಿಸ್ವಾರ್ಥತೆಯ ಮೂಲಕ ಸಮಾಜಕ್ಕೆ ಸೇವೆ ಸಲ್ಲಿಸುತ್ತಿದೆ ಎನ್ನುವ ಆತ್ಮತೃಪ್ತಿ ನಮ್ಮೆಲ್ಲರಿಗಿದೆ. ನೊಂದ ಜೀವಿಗಳಿಗೆ ನಾಡಿಮಿಡಿತವಾಗಿ ನಡೆಯಿಲ್ಲದ ಜೀವಿಗಳಿಗೆ ನೆಲೆಕಲ್ಪಿಸುವುದೇ ಕಾರುಣ್ಯ ಕುಟುಂಬದ ಮೂಲ ಉದ್ದೇಶವಾಗಿದೆ ಎಂದು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸಯ್ಯದ್ ಸೈಫುಲ್ಲಾ ಕೆ. ಎಸ್. ಟಿ. ಪೇದೆ ಅಧಿಕಾರಿಗಳು ಬಸ್ ನಿಲ್ದಾಣ ಸಿಂಧನೂರು. ಅಮರಮ್ಮ ನರ್ಸಿಂಗ್ ಅಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ ಜವಳಗೇರಾ. ಹಾಗೂ ಸಾಮಾಜಿಕ ಕಾರ್ಯಕರ್ತರುಗಳಾದ ಸುರೇಶ ಕಟ್ಟಿಮನಿ. ಮೌನೇಶ ದೊರೆ. ವೀರೇಶ ಹಾಗೂ ಬೇರೆ ಬೇರೆ ಕಡೆ ಹಲವಾರು ಸಾರ್ವಜನಿಕರುಗಳು ಉಪಸ್ಥಿತ-ರಿದ್ದು ಈ ನಿರ್ಗತಿಕರುಗಳನ್ನು ಕಳುಹಿಸಿಕೊಟ್ಟರು

## ಲಿಂಗಸುಗೂರ: ಮೀನುಗಾರಿಕೆ ಇಲಾಖೆಯಿಂದ ನೇರ ಗುತ್ತಿಗೆ ಅರ್ಜಿ ಆಹ್ವಾನ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು ಮೇ.27 (ಕರ್ನಾಟಕ ವಾರ್ತೆ): ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ಕೃಷ್ಣ ನದಿಭಾಗದ ಐದಬಾವಿಯಿಂದ ತಿಂತಣಿ ಬ್ರಿಜ್‌ಯವರೆಗೆ ಮೀನುಪಾಶುವಾರು ಹಕ್ಕನ್ನು 2026-27ನೇ ಮೀನುಗಾರಿಕೆ ಫಸಲಿ ವರ್ಷದಿಂದ 2030-31ನೇ ಮೀನುಗಾರಿಕೆ ಫಸಲಿ ವರ್ಷದವರೆಗೆ ಗರಿಷ್ಠ ಐದು ವರ್ಷಗಳ ಅವಧಿಗೆ ಸರ್ಕಾರದ ನಿಯಮಗಳ ಅರ್ಹ ಮೀನುಗಾರರ ಸಹಕಾರ ಸಂಘ ಮತ್ತು ಮೀನುಗಾರಿಕೆ ಇಲಾಖೆಯಡಿ ನೊಂದಣೆಯಾದ ಅರ್ಹ ಮೀನು ಉತ್ಪಾದಕರ ಸಂಸ್ಥೆಗಳಿಗೆ ನೇರ ಗುತ್ತಿಗೆ ನೀಡಲು ಅರ್ಜಿ ಆಹ್ವಾನಿಸಲಾಗಿದೆ.**

ಮೀನುಗಾರಿಕೆ ಇಲಾಖೆ
ಕರ್ನಾಟಕ ಸರ್ಕಾರ


ಜಲಸಂಪನ್ಮೂಲಗಳ ಮೀನುಪಾಶುವಾರು ಹಕ್ಕನ್ನು (ಅನುಬಂಧ-10) ಪಡೆಯಲಿಚ್ಛಿಸುವ ಅರ್ಹ ಮೀನುಗಾರರ ಸಹಕಾರ ಸಂಘ ಮಾತ್ರ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ದಿನಾಂಕ: 12-06-2026 ರೊಳಗಾಗಿ ಕಚೇರಿ ವೇಳೆಯಲ್ಲಿ ಈ ಕಚೇರಿಗೆ ಸಲ್ಲಿಸತಕ್ಕದ್ದು, ನಿಗದಿತ ಅವಧಿಯ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಗುತ್ತಿಗೆ ಪಡೆಯಲು ಸಲ್ಲಿಸಬೇಕಾದ ಅರ್ಜಿ (ಅನುಬಂಧ-9) ಷರತ್ತು ಮತ್ತು ನಿಬಂಧನೆಗಳು (ಅನುಬಂಧ-11) ಮತ್ತು ಗುತ್ತಿಗೆದಾರರು ಬರೆದುಕೊಡಬೇಕಾದ ಗುತ್ತಿಗೆ ಕರಾ-ರಿನ ಮುಚ್ಚಳಿಕೆ ಪತ್ರದ (ಅನುಬಂಧ-10)ರ ಪತ್ರಗಳನ್ನು ಕಚೇರಿಯ ವೇಳೆಯಲ್ಲಿ ಪಡೆಯಬಹುದು ಎಂದು ಲಿಂಗಸುಗೂರು ಮೀನುಗಾರಿಕೆ ಇಲಾಖೆಯ ಸಹಾಯಕ

## ಪುನೀತ್ ವೃದ್ಧಾಶ್ರಮ ಪೂಜೆ ಗಿಂತ ಮಿಗಲಾಗಿದ್ದು ಮೌಲಾಸಾಬ್ ಮಾಡಸಿರವಾರ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು : ನಗರದ ಪಿಡಬ್ಲ್ಯೂಡಿ ಕ್ಯಾಂಪಲ್ಲಿ ಯಮನೂರಪ್ಪ ದರ್ಗಾ ರಸ್ತೆ ನಾಗನ್ ತೋಟ ರುದ್ರಶ್ರಮ ಹಾಗೂ ವಯಸ್ಕರ ಬುದ್ಧಿಮಾಧ್ಯಮ ಆಶ್ರಮದಲ್ಲಿ ಇಂದು ಸಿಂಧನೂರು ತಾಲೂಕಿನ ಮಾಡಸಿರವಾರ ಗ್ರಾಮದ ಮೌಲಾಸಾಬ್ ಮತ್ತು ತಸ್ಲಿಂಬಾನು ರವರ 10 ನೇ ವರ್ಷದ ವಿವಾಹ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಪುನೀತ್ ವೃದ್ಧಾಶ್ರಮದಲ್ಲಿ ಇಡೀ ದಿನ ವಿವಿಧ ಮಾಪ್ರಸಾದ ಸೇವೆ ಹಾಗೂ ಹಣ್ಣು ಹಂಪಲಗಳನ್ನು ವಿತರಿಸುವ ಮೂಲಕ ಸರಳವಾಗಿ ಅರ್ಥಪೂರ್ಣವಾಗಿ ಆಚರಿಸಿಕೊಂಡರು**

ಈ ಕಾರ್ಯಕ್ರಮದಲ್ಲಿ ಆಶ್ರಮದ ವತಿಯಿಂದ ಮೌಲಾಸಾಬ್ ಮಾಡಸಿರುವ ದಂಪತಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು



ಈ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವ ಮೌಲಾಸಾಬ್ ಮಾಡಸಿರುವ ರವರು ಮಾತನಾಡಿ ಪುನೀತ್ ವೃದ್ಧಾಶ್ರಮ ಪೂಜೆ ಗಿಂತ ಮಿಗಲಾದದ್ದು ನಮ್ಮ ಭಾರತೀಯ ಸಂಸ್ಕೃತಿ ಸಂಸ್ಕಾರವನ್ನು ಉಳಿಸುವ ನಿಟ್ಟಿನಲ್ಲಿ ಪುನೀತ್ ವೃದ್ಧಾಶ್ರಮವು ಪ್ರಾಮಾಣಿಕವಾಗಿ ಸೇವೆ ಮಾಡುತ್ತಿದ್ದು ನಾವು ಸುಮಾರು ವರ್ಷಗಳಿಂದ ಪುನೀತ್ ಆಶ್ರಮ ಕೆ ಭೇಟಿ ಕೊಡುತ್ತಾ ಇದನ್ನು ಸ್ವಂತ ಕುಟುಂಬ ಎಂದುಕೊಂಡಿದ್ದೇನೆ ಇಂಥ ಪ್ರಮಾಣಿಕ ಸೇವೆ ಮಾಡುವ ಸಂಸ್ಥೆಗೆ ಸರ್ಕಾರದ ವತಿಯಿಂದ ಅನುದಾನ ಸಿಗಬೇಕು ಸಿಂಧನೂ-ರಿನ ಜನಪ್ರತಿನಿಧಿಗಳು ಮನಸ್ಸು ಮಾಡಿ ಆಶ್ರಮಕ್ಕೆ ಅನುದಾನ ಬರುವಂತೆ ಕಲ್ಪಿಸಿಕೊಟ್ಟರೆ ತಮ್ಮ ರಾಜಕೀಯ ಬದುಕಿಗೆ ಸಂಪೂರ್ಣ ಅರ್ಥ ಸಿಗುತ್ತದೆ ಪುನೀತ್ ಆಶ್ರಮ ಅನಾಥ-'ರ ಬದುಕಿನ ಬಂಡಿ ಗಾಲಿಗಳ ಆಶ್ರಮಕ್ಕೆ ಸಹಾಯ ಮಾಡುವ ಮಹಾದಾನಿಗಳು ನಾನು ನನ್ನದು ಎನ್ನುವ ಜಗತ್ತಿನಲ್ಲಿ ನಿಸ್ವಾರ್ಥದ ಸೇವೆ ಮಾಡುತ್ತಾ ಅದೆಷ್ಟು ಅಂದ ಅನಾಥರ ಬಾಳಿಗೆ ಬೆಳಕಾಗಿರುವ ನಮ್ಮ ಪುನೀತ್ ಆಶ್ರಮ ಕಲ್ಯಾಣ ಕರ್ನಾಟಕದ ಕರುಣೆಯ ಮಂದಿರವಾಗಿ ಅನಾಥ-'ರ ಬದುಕಿನ ಸುಂದರ ಕುಟುಂಬವಾಗಿರುವದು ನಮ್ಮೆಲ್ಲರಿಗೂ ಸಂತೋಷ ನಾವು ಸದಾ ಕಾಲ ಪುನೀತ್ ಆಶ್ರಮದ ಜೊತೆಗಿರುತ್ತೇವೆ ಎಂದು ಭಾವನಾತ್ಮಕವಾಗಿ ಮಾತನಾಡಿ ಹಣ್ಣು ಹಂಪಲುಗಳನ್ನು ವಿತರಿಸಿ ಕೇಕ್ ಕಟ್ ಮಾಡುವ ಮುಖಾಂತರ ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಿಕೊಂಡರು ಪುನೀತ್ ಆಶ್ರಮದ ಅಧ್ಯಕ್ಷರದ ಪಂಪಯ್ಯ ಸ್ವಾಮಿ ಹಿರೇಮಠ್ ಹಾಗೂ ರೇಖಾ ಸ್ವಾಮಿ ಹಿರೇಮಠ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ಹಜರತ್ ಬಿ ಮತ್ತು ಆಶ್ರಮದಲ್ಲಿರುವ ಎಲ್ಲಾ ತಾಯಂದಿರು ತಂದೆಯಂದಿರು ರುದ್ರರು ಎಲ್ಲರೂ ಭಾಗಿಯಾಗಿದ್ದರು

## ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ವ್ಯಕ್ತಿ, ಸಂಸ್ಥೆಗಳಿಂದ ಅರ್ಜಿ ಆಹ್ವಾನ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು ಮೇ.27 (ಕರ್ನಾಟಕ ವಾರ್ತೆ): ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯಾ ಮತ್ತು ವಿಕಲಚೇತನರ ಸಬಲೀಕರಣ ಇಲಾಖೆಯ ವತಿಯಿಂದ 2026-27ನೇ ಸಾಲಿನಲ್ಲಿ ವಿಕಲಚೇತನರಿಗಾಗಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ವ್ಯಕ್ತಿ ಹಾಗೂ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**

ಆಸಕ್ತರು ಅರ್ಜಿಗಳನ್ನು ದಿನಾಂಕ: 31-07-2026ರೊಳಗಾಗಿ ಆಂಗ್ಲ ಭಾಷೆಯಲ್ಲಿ www.depwd.gov.in and www.awards.gov.in ಆನ್‌ಲೈನ್ ವೆಬ್‌ಸೈಟ್‌ನಲ್ಲಿ ನೇರವಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಿದ ಪ್ರಸ್ತಾವನೆಯನ್ನು ಹಾರ್ಡ್ ಪ್ರತಿಯೊಂದಿಗೆ ಪ್ರಸ್ತಾವನೆಯನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾ-ರಿಗಳ ಕಚೇರಿ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಕಟ್ಟಡ ಮ.ನಂ:-1-3-1411/4 ಆಶಾಪೂರು ರಸ್ತೆ, ಆಫೀರ?ಸ್ ಕಾಲೋನಿ ಎದುರುಗಡೆ ಶ್ರೀ ರಾಜಾಮಾತಾ ದೇವಸ್ಥಾನ ಹತ್ತಿರ, ರಾಯಚೂರು ಇಲ್ಲಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08532-200992ಗೆ ಕಚೇರಿ ಸಮಯದಲ್ಲಿ ಸಂಪರ್ಕ ಮಾಡಬಹುದಾಗಿದೆ. ತಡವಾಗಿ ಬಂದಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಳೆಗಾಲದಲ್ಲಿ ಸಾಂಕ್ರಾಮಿಕ ರೋಗಗಳ ಬಗ್ಗೆ ಜಾಗೃತಿ:

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಯಚೂರ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರ್ ಜಿಲ್ಲಾ ಆಶ್ರಿತ ರೋಗಗಳ ನಿಯಂತ್ರಣ ವಿಭಾಗ ರಾಯಚೂರ್ ಹಾಗೂ ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ್ ಪ್ರಾಥಮಿಕ ಆರೋಗ್ಯ ಕೇಂದ್ರ ಸಾಲಗುಂದ ಇವರಸಂಯುಕ್ತ ಆಶ್ರಯದಲ್ಲಿ ರವುಡಕುಂದ ಆಯುಷ್ ಆರೋಗ್ಯ ಮಂದಿರ ವ್ಯಾಪ್ತಿಗೆ ಬರುವ ಸಾಸಲಮರಿ ಕ್ಯಾಂಪಿನಲ್ಲಿ ಶ್ರೀಮತಿ ಗೀತಾ ಹಿರೇಮಠ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ್ ಇವರು ಮಾತನಾಡಿ ಮಳೆಗಾಲದಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಹಾಗೂ ಸಾಂಕ್ರಾಮಿಕ ರೋಗಗಳ ಬಗ್ಗೆ ಗರ್ಭಿಣಿ ತಾಯಂದಿರಿಗೆ ಹಾಗೂ ಸಾರ್ವಜನಿಕರಿಗೆ ಆರೋಗ್ಯದ ಕುರಿತು ಮಾಹಿತಿ ನೀಡಲಾಯಿತು .**



ಮಳೆಗಾಲದಲ್ಲಿ ಆರೋಗ್ಯ ಮತ್ತು ಸುರಕ್ಷತೆಯನ್ನು ಕಾಪಾಡಿಕೊಳ್ಳಲು ಕೆಲವು ಅತ್ಯಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು ಬಹಳ ಮುಖ್ಯ ಆರೋಗ್ಯ ರಕ್ಷಣೆ ಕಲುಷಿತ ನೀರು ಮತ್ತು ಸೊಳ್ಳೆಗಳಿಂದ ಹರಡುವ ಡೇಂಗಿ ಮಲೇರಿಯ ಟೈಪಾಡ್ ಮತ್ತು ಕಾಮಾಲೆ ಕಾಯಿಲೆಗಳ ಬಗ್ಗೆ ಎಚ್ಚರವಿರಬೇಕು ಕುಡಿಯುವ ನೀರನ್ನು ಕಾಯಿಸಿ ಸೋಸಿ ಕುಡಿಯಿರಿ ವಯಕ್ತಿಕ ನೈರ್ಮಲ್ಯ ಮಳೆಯಲ್ಲಿ ನೆನೆಯುವುದನ್ನು ತಪ್ಪಿಸಿ ಒಂದು ವೇಳೆ ನೆನೆದರೆ ತಕ್ಷಣ ಇದ್ದ ನೀರಿನಲ್ಲಿ ಸ್ನಾನ ಮಾಡಿ ಹಣ ಬಟ್ಟೆಗಳನ್ನ ಧರಿಸಿ ಮನೆ ಮತ್ತು ಪರಿಸರ ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳಿ ಇದರಿಂದ ಸೊಳ್ಳೆಗಳ ಉತ್ಪತ್ತಿಯನ್ನು ತಡೆಯಬಹುದು ಪ್ರಯಾಣ ಮತ್ತು ವಿದ್ಯುತ್ ಗುಡುಗು ಮಿಂಚಿನ ಸಮಯದಲ್ಲಿ ಮರಗಳ ಕೆಳಗೆ ನಿಲ್ಲಬೇಡಿ ಹಳೆಯ ಕಟ್ಟಡಗಳು ಮತ್ತು ವಿದ್ಯುತ್ ಕಂಬಗಳ ಬಳಿ ಓಡಾಡುವಾಗ ಎಚ್ಚರಿಕೆವಹಿಸಿ ಆರೋಗ್ಯದಲ್ಲಿ ಏರುಪೇರು ಆದಾಗ ನಿರ್ಲಕ್ಷ ಮಾಡದೆ ತಕ್ಷಣ ವೈದ್ಯರನ್ನು ಸಂಪರ್ಕಿಸಿ ಈ ಸಂದರ್ಭದಲ್ಲಿ ಪ್ರಸನ್ನ ಕುಮಾರ್ ಸಮುದಾಯ ಆರೋಗ್ಯ ಅಧಿಕಾರಿ, ಶ್ರೀಮತಿ ಅಂಬಮ್ಮ ಪ್ರಾಥ-'ಮಿಕ ಆರೋಗ್ಯಸುರಕ್ಷತಾ ಅಧಿಕಾರಿ, ಶಿವಕುಮಾರ ಆರೋಗ್ಯ ನಿರೀಕ್ಷಿಣಾಧಿಕಾ-ರಿಗಳು, ಶೋಭಾ ರಾಣಿ ಆಶಾ ಕಾರ್ಯಕರ್ತೆ, ಜ್ಯೋತಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಗರ್ಭಿಣಿ ತಾಯಂದಿರು ಸಾರ್ವಜನಿಕರು ಉಪಸ್ಥಿತರಿದ್ದರು..

# ತೈಲ ಪೂರೈಕೆ ಕುರಿತು ಅಧಿಕಾರಿಗಳೊಂದಿಗೆ ಸಭೆ

## ಜಿಲ್ಲೆಯಲ್ಲಿ ತೈಲ ಕೊರತೆ ಇಲ್ಲ, ಸಾರ್ವಜನಿಕರು ಅಂತಕ ಪಡಬಾರದು: ಜಿಲ್ಲಾಧಿಕಾರಿ ಪೂವಿತಾ ಎಸ್.

**ನೈಜ್ಯ ದೆಸೆ ನ್ಯೂಸ್**

ರಾಯಚೂರು ಮೇ.27 (ಕರ್ನಾಟಕ ವಾರ್ತೆ): ಜಿಲ್ಲೆಯಲ್ಲಿ ಪೆಟ್ರೋಲ್, ಡೀಸೆಲ್ ಹಾಗೂ ಎಲ್.ಪಿ.ಜಿ ಅನಿಲ್ ಪೂರೈಕೆಯಲ್ಲಿ ಯಾವುದೇ ಕೊರತೆಯಿಲ್ಲ. ಹಾಗಾಗಿ ಸಾರ್ವಜನಿಕರು ಅಂತಕ ಪಡಬಾರದು ಎಂದು ಜಿಲ್ಲಾಧಿಕಾ-ರಿಗಳಾದ ಪೂವಿತಾ ಎಸ್. ಅವರು ಹೇಳಿದರು.

ಮೇ.27ರ ಬುಧವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ವಿಡಿಯೋ ಕಾನ್ಫಾರೇಷನ್ ಸಭಾಂಗಣದಲ್ಲಿ ಜಿಲ್ಲೆಯ ಅಧಿಕಾ-ರಿಗಳು, ತೈಲ ಕಂಪನಿಯ ಸೇಲ್ಸ್ ಅಧಿಕಾ-ರಿಗಳು ಹಾಗೂ ಪೆಟ್ರೋಲ್, ಡೀಸೆಲ್ ಬಂಕ್ ಪ್ರತಿನಿಧಿಗಳೊಂದಿಗೆ ವಿಡಿಯೋ ಸಂವಾದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯಲ್ಲಿ ತೈಲ ಪೂರೈಕೆ ವಿಷಯದಲ್ಲಿ ಕಂಪನಿಗಳು ಜಾಗರೂಕತೆ ವಹಿಸಿ, ಸಮಸ್ಯೆ ಬಾರದ ರೀತಿಯಲ್ಲಿ




ಇಂಧನ ಪೂರೈಸಬೇಕು. ಜಿಲ್ಲೆಗೆ ವಿವಿಧ ತೈಲ ಕಂಪನಿ ವಿತರಕರು ಸಮರ್ಪಕವಾಗಿ ಪೆಟ್ರೋಲ್ ಮತ್ತು ಡೀಸೆಲ್ ಪೂರೈಸಬೇಕು. ಎಲ್ಲ ಬಂಕ್ ಮಾಲೀಕರು ದೈನಂದಿನ ಮಾಹಿತಿ ಒದಗಿಸಬೇಕು. ಸಾರ್ವಜನಿಕರ ಬೇಡಿಕೆ ಅನುಸಾರ ಇಂಧನ ಪೂರೈಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮಾರಾಟಗಾರರಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಮುಂಗಾರು ಆರಂಭವಾಗುತ್ತಿರುವುದರಿಂದ ರೈತರ ಭೂಮಿ ಉಳುಮೆ ಕಾರ್ಯ ನಡೆಯುತ್ತಿದೆ. ಹಾಗಾಗಿ ರೈತರಿಗೆ ಯಾವುದೇ ಅನಾನುಕೂಲ ಹಾಗೂ ಸಮಸ್ಯೆಯಾಗದಂತೆ ಇಂಧನ ಪೂರೈಕೆ ಮಾಡಬೇಕು. ನಿಗದಿತ ದರದಲ್ಲಿ ತೈಲವನ್ನು ಮಾರಾಟ ಮಾಡಬೇಕು. ಒಂದು ವೇಳೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದಲ್ಲಿ ಅಂತಹವರ ವಿರುದ್ಧ ಕ್ರಮ ಜರುಗಿಸಲಾಗುತ್ತದೆ ಎಂದು ಸಂಬಂಧಿಸಿದ ಅಧಿಕಾ-ರಿಗಳಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ಗ್ರಾಹಕರ ಹಿತರಕ್ಷಣೆ, ಇಂಧನ ಸುರಕ್ಷತೆ ಮತ್ತು ನಿಯಮಾವಳಿಗಳ ಪಾಲನೆ ಕು-ರಿತು ಸಭೆಯಲ್ಲಿ ಚರ್ಚೆ ನಡೆಸಲಾಯಿತು. ತೈಲ ಕಂಪನಿ ಪ್ರತಿನಿಧಿಗಳು ಮಾತನಾಡಿ, ಜಿಲ್ಲೆಯಲ್ಲಿ ಇಂಧನದ ಕೊರತೆ ಇರುವುದಿಲ್ಲ ಎಂದು ಸ್ಪಷ್ಟಪಡಿಸುವುದರ ಜೊತೆಗೆ ಇಂಡೆಂಟ್ ಅನುಗುಣವಾಗಿ ಇಂಧನ ಪೂರೈಸಲಾಗುತ್ತಿದೆ ಎಂದು ಸಭೆಗೆ ಮಾಹಿತಿ ನೀಡಿದರು. ಆಹಾರ ಇಲಾಖೆಯ ಉಪ ನಿರ್ದೇಶಕ ನಜೀರ್ ಅಹಮದ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಬಿಪಿಸಿಎಲ್ 48, ಐಒಸಿಎಲ್ 84 ಎಚ್‌ಪಿಸಿ-ಎಲ್ 30 ಇದ್ದು, ನಯಾರ 32 ಒಳಗೊಂಡಂತೆ ಒಟ್ಟು 194 ಪೆಟ್ರೋಲ್ ಬಂಕ್‌ಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಸಭೆಗೆ ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವ-ರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ, ರಾಯಚೂರು ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್, ಲಿಂಗಸುಗೂರು ಸಹಾಯಕ ಆಯುಕ್ತ ಬಸವಣ್ಣೆಪ್ಪ ಕಲಶೆಟ್ಟಿ, ರಾಯಚೂರು ತಹಶಿಲ್ದಾರ್ ಸುರೇಶ್ ವರ್ಮಾ, ಆಹಾರ ಇಲಾಖೆಯ ವ್ಯವಸ್ಥಾಪಕ ಹರೀಶ್ ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕಿನ ತಹಶೀಲ್ದಾರರು, ವಿವಿಧ ತೈಲ ಕಂಪನಿಗಳ ಪ್ರತಿನಿಧಿಗಳು ಸಭೆಯಲ್ಲಿ ಇದ್ದರು.

# ನೇಮಕಾತಿ ಪ್ರಕಟಣೆ

ಡಿಸಿ ಆಫೀಸ್ ಚಿಕ್ಕಬಳ್ಳಾಪುರ ನೇಮಕಾತಿ 2026 169 ನಾಗರಿಕ ಸೇವಕರ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಮೇ 26, 2026 ಡಿಸಿ ಆಫೀಸ್ ಚಿಕ್ಕಬಳ್ಳಾಪುರ ನೇಮಕಾತಿ 2026: 169 ನಾಗರಿಕ ಸೇವಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ ಕಚೇರಿ ಮೇ 2026 ರ ಡಿಸಿ ಆಫೀಸ್ ಚಿಕ್ಕಬಳ್ಳಾಪುರ ಅಧಿಕೃತ ಅಧಿಸೂಚನೆಯ ಮೂಲಕ ನಾಗರಿಕ ಸೇವಕರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಚಿಕ್ಕಬಳ್ಳಾಪುರ ? ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 30–ಮೇ–2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 01–05–2026 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30–ಮೇ–2026 ಅಧಿಕೃತ ವೆಬ್‌ಸೈಟ್: chikkaballapurcity.mrc.gov.in

## "ಮತದಾರರ ಪಟ್ಟಿಯಲ್ಲಿ ಗಂಭೀರ ಲೋಪ: ಚುನಾವಣಾ ಆಯೋಗಕ್ಕೆ ಕರವೇ ದೂರು"

ನೈಜ್ಯ ದೆಸೆ ನ್ಯೂಸ್

ಮಾನ್ವಿ –: ರಾಯಚೂರು ಜಿಲ್ಲೆಯ ಮಾನ್ವಿ ನಗರದ ಎಲ್ಲಾ 27 ವಾರ್ಡ್‌ಗಳಲ್ಲಿ ಮತದಾರರ ಪಟ್ಟಿಯಲ್ಲಿ ಸಾಕಷ್ಟು ಲೋಪ ದೋಷಗಳು ಕಂಡುಬಂದಿದ್ದು ತಕ್ಷಣ ಸರಿಪಡಿಸುವಂತೆ ಕರ್ನಾಟಕ ರಕ್ಷಣಾ ವೇದಿಕೆ (ಜನಪರ ಬಣ) ಮುಖ್ಯ ಚುನಾವಣಾಧಿಕಾರಿಗಳಿಗೆ ಆಗ್ರಹಿಸಿದೆ.



15 ಮತ್ತು 16ನೇ ವಾರ್ಡ್‌ಲ್ಲಿ ಹಲವಾರು ಗಂಭೀರ ಲೋಪದೋಷಗಳು ಪತ್ತೆಯಾಗಿವೆ. 27ನೇ ವಾರ್ಡ್‌ಲ್ಲಿ ಸ್ವಲ್ಪ ಲೋಪಗಳಿವೆ. ಇದರಿಂದ ಮುಂಬರುವ ಚುನಾವಣೆಯ ಪಾರದರ್ಶಕತೆ ಮತ್ತು ನ್ಯಾಯ ಸಮ್ಮತತೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಕರವೇ ರಾಜ್ಯಾಧ್ಯಕ್ಷ ಶ್ರೀಕಾಂತ ಪಾಟೀಲ ಗೂಳಿ ಆರೋಪಿಸಿದ್ದಾರೆ. ಪ್ರಮುಖಲೋಪಗಳು: ಸಾವನ್ನಪ್ಪಿದವರ ಹೆಸರುಗಳು ಇನ್ನೂ ಪಟ್ಟಿಯಿಂದ ತೆಗೆಯಲಾಗಿಲ್ಲ. ಒಂದೇ ವ್ಯಕ್ತಿಯ ಹೆಸರು ಎರಡು ಅಥವಾ ಹೆಚ್ಚಿನ ಕಡೆಗಳಲ್ಲಿ ದಾಖಲಾಗಿದೆ. ಅರ್ಹ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದು ಹಾಕಲಾಗಿದೆ.

ವಿಳಾಸ ಬದಲಾವಣೆ ಅಥವಾ ಸ್ಥಳಾಂತರಗೊಂಡವರ ಹೆಸರು ಮಾನ್ವಿ ನಗರದ ಮತದಾರರ ಪಟ್ಟಿಯಲ್ಲಿ ಅಕ್ರಮವಾಗಿ ಸೇರ್ಪಡೆಯಾಗಿವೆ. ಕೆಲವು ವಾರ್ಡ್‌ಗಳಲ್ಲಿ ಮತದಾರರ ಮಾಹಿತಿ ತಪ್ಪಾಗಿ ನಮೂದಿಸಲಾಗಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಹಲವು ಬಾರಿ ಮಾನ್ಯ ತಹಸೀಲ್ದಾರರಿಗೆ ದೂರು ನೀಡಿದ್ದರೂ ಮತದಾರ ಪಟ್ಟಿ ಪರಿಷ್ಕರಣೆ ಆಗಿಲ್ಲ ಎಂದು ಕರವೇ ದೂರಿದೆ. ಕರವೇ ಆಗ್ರಹ–: ಸಂಬಂಧಪಟ್ಟ ಹಾಗೂ ಅಧಿಕಾರಿಗಳ ಮೂಲಕ ಸಮಗ್ರ ಪರಿಶೀಲನೆ ನಡೆಸಿ, ಮತದಾರರ ಪಟ್ಟಿಯಲ್ಲಿನ ಎಲ್ಲಾ ಲೋಪ ದೋಷಗಳನ್ನು,ತಕ್ಷಣ ಸರಿಪಡಿಸಿ,ನಿಖರ ಹಾಗೂ ಪಾರದರ್ಶಕ ಮತದಾರರ ಪಟ್ಟಿಯನ್ನು ಪ್ರಕಟಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

## "ಬಿತ್ತನೆ ಬೀಜ ವಿತರಣೆಗೆ ಚಾಲನೆ"

ನೈಜ್ಯ ದೆಸೆ ನ್ಯೂಸ್

ಸಿರವಾರ ತಾಲ್ಲೂಕಿನ ಮಲ್ಲಟ ರೈತ ಸಂಪರ್ಕ ಕೇಂದ್ರದಲ್ಲಿ ಕೃಷಿ ಅಧಿಕಾರಿ ಮಾರುತಿ ಆರೋಲಿ ಅವರು ರೈತ–ರಿಗೆ ರಿಯಾಯಿತಿ ದರದ ಬಿತ್ತನೆ ಬೀಜ ವಿತರಿಸಿದರು. ಸಿರವಾರ –: ತಾಲ್ಲೂಕಿನ ಮಲ್ಲಟ ರೈತ ಸಂಪರ್ಕ ಕೇಂದ್ರದಲ್ಲಿ ಮುಂಗಾರು ಹಂಗಾಮಿಗಾಗಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣೆಗೆ ಮಂಗಳವಾರ ಚಾಲನೆ ನೀಡಲಾಯಿತು.



ಬೀಜ ವಿತರಣೆಗೆ ಚಾಲನೆ ನೀಡಿ ಮಾತನಾಡಿದ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಮಾರುತಿ ಆರೋಲಿ 'ಮುಂಗಾರು ಹಂಗಾಮಿನ ಬಿತ್ತನೆಗೆ ರೈತರಿಗೆ ಅನುಕೂಲ ಕಲ್ಪಿಸಲು ಸರ್ಕಾರದಿಂದ ರಿಯಾಯಿತಿ ದರದಲ್ಲಿ ಉತ್ತಮ ಗುಣಮಟ್ಟದ ಬೀಜ ವಿತರಿಸಲಾಗುತ್ತಿದೆ. ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು' ಎಂದರು. ಮಳೆ ಆರಂಭವಾಗಿದ್ದು ರೈತರು ಬಿತ್ತನೆಗೆ ಸಿದ್ಧತೆ ಮಾಡಿಕೊಳ್ಳಬೇಕು. ಇಲಾಖೆಯಿಂದ ಸಮಯಕ್ಕೆ ಸರಿಯಾಗಿ ಬೀಜ, ಗೊಬ್ಬರ ಪೂರೈಕೆಗೆ ಕ್ರಮ ವಹಿಸಲಾಗಿದೆ. ರೈತರು ಕೇಂದ್ರಕ್ಕೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ತಿಳಿಸಿದರು. ರೈತ ಸಂಪರ್ಕ ಕೇಂದ್ರದ ತಾಂತ್ರಿಕ ವ್ಯವಸ್ಥಾಪಕ ನಾಗರಾಜ, ಸಿಬ್ಬಂದಿ ಆಂಜನೇಯ, ಸುನೀಲ, ಬುಡ್ಡಪ್ಪ ಹಾಗೂ ಸುತ್ತಮುತ್ತಲಿನ ಗ್ರಾಮಗಳ ರೈತರು ಉಪಸ್ಥಿತರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಮಸ್ಕಿ ನಗರ ಯೋಜನಾ ಪ್ರಾಧಿಕಾರಕ್ಕೆ ಆರ್.ಸಿದ್ದನಗೌಡರಿಂದ ರಾಜಿನಾಮೆ

ನೈಜ್ಯ ದೆಸೆ ನ್ಯೂಸ್

ಮಸ್ಕಿ: ನೂತನವಾಗಿ ರಚನೆಯಾಗಿದ್ದ ಮಸ್ಕಿ ನಗರ ಯೋಜನಾ ಪ್ರಾಧಿಕಾರಕ್ಕೆ ಅಧ್ಯಕ್ಷರಾಗಿದ್ದ ಆರ್.ಸಿದ್ದನಗೌಡ ತುರವಿಹಾಳ ಅವರು ನಗರ ಯೋಜನಾ ಪ್ರಾಧಿಕಾರದ ಕಾರ್ಯದರ್ಶಿ ದೀಪಾ ಚೋಳ ಅವರಿಗೆ ಬುಧವಾರ ರಾಜಿನಾಮೆ ಪತ್ರವನ್ನು ಸಲ್ಲಿಸಿದರು.

ನಂತರ ಮಾತನಾಡಿದ ಅವರು ಮುಂಬರುವ ಗ್ರಾಮ ಪಂಚಾಯತಿ, ತಾಲೂಕು ಪಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ದೃಷ್ಟಿಕೋನದಲ್ಲಿಟ್ಟುಕೊಂಡು ಪಕ್ಷವನ್ನು ಸಂಘಟಿಸುವ ಸಲುವಾಗಿ ರಾಜಿನಾಮೆ ನೀಡಿದ್ದೇನೆ. ಪ್ರಾಧಿಕಾರ ಒಂದು ಪಟ್ಟಣಕ್ಕೆ ಸೀಮಿತವಾಗಿದ್ದರಿಂದ ಕ್ಷೇತ್ರದಲ್ಲಿ ಓಡಾಟ ಮತ್ತು





ಮುಂದಿನ ದಿನಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಎದುರಿಸಲು ಪಕ್ಷವನ್ನು ತಳಮಟ್ಟದಿಂದ ಸಂಘಟಿಸಲು ಯುವ ನಾಯಕ ರವಿ ಭೋಸರಾಜು ಅಣ್ಣನವರು ತಿಳಿಸಿದ್ದರಿಂದ ನಾನು ಪ್ರಾಧಿಕಾರದ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ನೀಡಿದ್ದೇನೆ.– ಆರ್.ಸಿದ್ದನಗೌಡ ತುರವಿಹಾಳ ನಗರ ಯೋಜನಾ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷರು ಮಸ್ಕಿ.

ಪಕ್ಷವನ್ನು ಸಂಘಟಿಸುವಲ್ಲಿ ಸಾಧ್ಯವಾಗದೇ ಇರುವುದರಿಂದ ಮತ್ತು ಪಕ್ಷದ ಮುಖಂಡರ ಮತ್ತು ಕಾಂಗ್ರೆಸ್ ಪಕ್ಷದ ಯೂತ್ ಐಕಾನ್ ರವಿ ಭೋಸರಾಜು ಅಣ್ಣನ ಅವರ ಮಾರ್ಗದರ್ಶನದ ಮೇರೆಗೆ ರಾಜಿನಾಮೆ ನೀಡಿದ್ದೇನೆ ಎಂದು ಪತ್ರಿಕಾ ಹೇಳಿಕೆ ನೀಡಿದ್ದಾರೆ.

# ನಾಪತ್ತೆಯಾಗಿದ್ದ ವೈದ್ಯಕೀಯ ವಿದ್ಯಾರ್ಥಿ ಮುಂಬೈ ಬೀದಿಗಳಲ್ಲಿ ಭಿಕ್ಷೆ ಬೇಡುತ್ತಿದ್ದ

ನೈಜ್ಯ ದೆಸೆ ನ್ಯೂಸ್

**ಮುಂಬೈ: ಮಾನಸಿಕ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದ ಮತ್ತು 47 ದಿನಗಳ ಕಾಲ ನಾಪತ್ತೆಯಾಗಿ ಬೀದಿಗಳಲ್ಲಿ ಭಿಕ್ಷೆ ಬೇಡುತ್ತಿದ್ದ ನಾಂದೇಡ್‌ನ 25 ವರ್ಷದ ವೈದ್ಯಕೀಯ ವಿದ್ಯಾರ್ಥಿಯನ್ನು ಮುಂಬೈ ಪೊಲೀಸರು ರಕ್ಷಿಸಿದ್ದಾರೆ.**

ಹೋಮಿಯೋಪತಿಕ್ ಮೆಡಿಸಿನ್ ಮತ್ತು ಸರ್ಜರಿಯ ಮೂರನೇ ವರ್ಷದ ವಿದ್ಯಾರ್ಥಿಯಾಗಿದ್ದ ಯುವಕ ಏಪ್ರಿಲ್ 4ರಂದು ಜಲಗಾಂವ್‌ನಲ್ಲಿರುವ ತನ್ನ ಕಾಲೇ–ಜಿಗೆ ಹೋಗುವ ದಾರಿಯಲ್ಲಿ ನಾಪತ್ತೆಯಾಗಿದ್ದ, ರೈಲು ಪ್ರಯಾಣದ ಸಮಯದಲ್ಲಿ ತನ್ನ ಬ್ಯಾಗ್ ಮತ್ತು ಫೋನ್ ಕಳೆದುಕೊಂಡಿದ್ದ ಈತ ಮುಂಬೈನಲ್ಲಿ ಆಹಾರಕ್ಕಾಗಿ ಭಿಕ್ಷೆ ಬೇಡುತ್ತಿದ್ದ.

ಯುವಕ ದೈಹಿಕವಾಗಿ ದುರ್ಬಲನಾಗಿ ಕಾಣಿಸುತ್ತಿದ್ದು, ಪೊಲೀಸರ ಪ್ರಶ್ನೆಗಳಿಗೆ ಸ್ಪಷ್ಟವಾಗಿ ಪ್ರತಿಕ್ರಿಯಿಸಲು ಸಾಧ್ಯವಾಗಿದ್ದರೂ ಆತ ತನ್ನ ಹೆಸರು ಮತ್ತು ಊರನ್ನು ಹಂಚಿಕೊಳ್ಳುವಲ್ಲಿ ಯಶಸ್ವಿಯಾದ ಎಂದು



ಮಲಾಡ್ ಪೊಲೀಸ್ ಠಾಣೆಯ ಅಧಿಕಾರಿ ತಿಳಿಸಿದ್ದಾರೆ. ನಾಂದೇಡ್‌ನ ತಮ್ಸಾ ಪೊಲೀಸ್ ಠಾಣೆಯಲ್ಲಿ ವಿವರಗಳನ್ನು ಪರಿಶೀಲಿಸಲಾಗಿದೆ, ಅಲ್ಲಿ ಅವನ ಹೆಸರಿನಲ್ಲಿ ಕಾಣೆಯಾದವರ ದೂರು ದಾಖಲಾಗಿದೆ ಎಂದು ಹೇಳಿದರು.

ತನಿಖೆಗಳು ಅಭಯ್ ಜಲಗಾಂವ್‌ಗೆ ರೈಲು ಪ್ರಯಾಣದ ಸಮಯದಲ್ಲಿ ತನ್ನ ಮೊಬೈಲ್ ಫೋನ್ ಮತ್ತು ಗುರುತಿನ ದಾಖಲೆಗಳು ಸೇರಿದಂತೆ ತನ್ನ ಎಲ್ಲಾ ವಸ್ತುಗಳನ್ನು ಕಳೆದುಕೊಂಡಿದ್ದಾನೆ ಎಂದು ಬಹಿರಂಗಪಡಿಸಿವೆ. ಮುಂಬೈನಲ್ಲಿ ಹಣ ಅಥವಾ ಸಂವಹನ ಸಾಧನಗಳಿಲ್ಲದೆ ಸಿಲುಕಿಕೊಂಡಿದ್ದ ಅವರು ಭಿಕ್ಷೆ ಬೇಡಲು ಆರಂಭಿಸಿದರು ಎಂದು ಅಧಿಕಾರಿ ಹೇಳಿದರು.

ಏಪ್ರಿಲ್ 6ರಿಂದ ಬೆಲ್ಲೋನಿ ಕುಟುಂಬವು ಅಭಯ್ ಅವರನ್ನು ತೀವ್ರವಾಗಿ ಹುಡುಕುತ್ತಿತ್ತು, ನಂತರ ಅವರು ರೈಲ್ವೆ ಮಾರಾಟಗಾರರ ಫೋನ್ ಬಳಸಿ ಅವರನ್ನು ಸಂಪರ್ಕಿಸಿದರು. ಆದಾಗ್ಯೂ, ಅವರು ತಮ ಪರಿಸ್ಥಿತಿಯನ್ನು ವಿವರಿಸುವ ಮೊದಲೇ ಕರೆ ಸಂಪರ್ಕ ಕಡಿತಗೊಂಡಿತು, ಮತ್ತು ಮಾರಾಟಗಾರರು ನಂತರ ಅವರು ಹೊರಟು ಹೋಗಿದ್ದಾರೆ ಎಂದು ಕುಟುಂಬಕ್ಕೆ ತಿಳಿಸಿದರು. ಕೊನೆಗೆ ಮೇ 16ರಂದು ನಾಂದೇಡ್ ಪೊಲೀಸರಿಗೆ ಔಪಚಾರಿಕ ದೂರು ನೀಡಿದೆ. ಕಾರ್ಯಾಚರಣೆ ಕೈಗೊಂಡಿದ್ದ ಪೊಲೀಸರು ಈಗ ವಿದ್ಯಾರ್ಥಿಯನ್ನು ವಶಕ್ಕೆ ಪಡೆದು ಸುರಕ್ಷಿತವಾಗಿ ಆತನ ಕುಟುಂಬಕ್ಕೆ ಸೇರಿಸಿದ್ದಾರೆ.

# "ಇಳಿ ವಯಸ್ಸಿನಲ್ಲೂ ಸ್ವಾಭಿಮಾನದ ದುಡಿಮೆ"

ನೈಜ್ಯ ದೆಸೆ ನ್ಯೂಸ್

**ಸಿರವಾರ: ವಯಸ್ಸು 70ರ ಗಡಿ ದಾಟಿದಾಗ ದೇಹ ದಣಿಯುತ್ತದೆ, ಮನಸ್ಸು ಆಸರೆ ಹುಡುಕುತ್ತದೆ. ಆದ–'ರೆ ತಾಲ್ಲೂಕಿನ ಶಾಖಾಪುರ ಗ್ರಾಮದ ವೃದ್ದೆ ಯಲ್ಲಮ್ಮ ನರೇಗಾದಡಿ ಕೆಲಸ ಮಾಡಿ ಸ್ವಾಭಿಮಾನಿಯಾಗಿ ಬದುಕುವ ಮೂಲಕ ಮಾದರಿಯಾಗಿದ್ದಾರೆ. ಪತಿಯನ್ನು ಕಳೆದುಕೊಂಡ ಯಲ್ಲಮ್ಮನಿಗೆ ಮಕ್ಕಳಿಲ್ಲ, ಬಂಧುಗಳು ಹತ್ತಿರ ಸುಳಿಯುತ್ತಿಲ್ಲ, ಜೀವನೋಪಾಯಕ್ಕೆ ನರೇಗಾ ಕೂಲಿ ಕೆಲಸ ಆಸರೆಯಾಗಿದೆ.**

"ಕೈ ಕಾಲು ಗಟ್ಟಿ ಇರುವ ತನಕ ದುಡಿದು ತಿನ್ನಬೇಕು ಯಾರ ಹಂಗಿನಲ್ಲೂ ಬದುಕಬಾರದು' ಎನ್ನುತ್ತಾರೆ ಯಲ್ಲಮ್ಮ 'ಪತಿ ತೀ–ರಿಕೊಂಡ ನಂತರ ಒಪ್ಪೊತ್ತಿನ ಊಟಕ್ಕೂ ಕಷ್ಟವಾಗಿ–



ತ್ತು. ಆಗ ಜಾಬ್ ಕಾರ್ಡ್ ಮಾಡಿಸಿಕೊಂಡು ನರೇಗಾ ಕೆಲಸಕ್ಕೆ ಹೋದೆ ಅಂದಿನಿಂದ ಅದೇ ನನ್ನ ಬದುಕಿಗೆ ಆಧಾರವಾಗಿದೆ' ಎಂದು ಹೇಳುತ್ತಾರೆ. ನರೇಗಾದಡಿ ಶಾಖಾಪುರದಲ್ಲಿ ಪ್ರಸ್ತುತ ನಡೆಯುತ್ತಿರುವ ನಾಲೆ ಹೂಳೆತ್ತುವ ಕಾಮಗಾರಿಯಲ್ಲಿ ರಣ ಬಿಸಿಲನ್ನು ಲೆಕ್ಕಿಸದೇ ಉತ್ಸಾಹದಿಂದ ಮಣ್ಣು ಹೊರುತ್ತಾರೆ. ಜೊತೆಗಿರುವ ಯುವಕ ಯುವತಿಯರೇ ಸುಸ್ತಾದರೂ ಯಲ್ಲಮ್ಮ ಮಾತ್ರ ಆಯಾಸವಿಲ್ಲದೆ ದುಡಿಯುತ್ತಾರೆ. 'ದುಡಿಯೋಣ ಬಾ' ಅಭಿಯಾನದಡಿ 7 ದಿನಗಳ ನರೇಗಾ ಕೆಲಸ ಮಾಡುತ್ತಿರುವ ಯಲ್ಲಮ್ಮ ಯಾರ ಹಂಗೂ ಇಲ್ಲದೆ ಒಂಟಿ ಜೀವನ ನಡೆಸುತ್ತಿದ್ದಾರೆ.

ಕಳೆದ 8–10 ವರ್ಷಗಳಿಂದ ನರೇಗಾದಡಿ ನಾಲೆ, ಹಳ್ಳ ಕೊಳ್ಳಗಳ ಹೂಳೆತ್ತುವ ಕಾಮಗಾರಿಯಲ್ಲಿ ಯಲ್ಲಮ್ಮ ದುಡಿಯುತ್ತಿದ್ದಾರೆ. ಇಲ್ಲಿಯವರೆಗೆ ಅವರಿಗೆ ಸಿಕ್ಕ ಮಾನವ ದಿನಗಳಲ್ಲಿ ಒಂದು ದಿನವೂ ತಪ್ಪದೇ ಕೆಲಸ ಮಾಡಿ ಕೂಲಿ ಪಡೆದಿದ್ದು, ಇದೇ ಹಣದಲ್ಲಿ ಮೂರು ಹೊತ್ತು ಊಟ ಮಾಡಿ ನೆಮ್ಮದಿ ಕಂಡುಕೊಂಡಿದ್ದಾರೆ. ನರೇಗಾ ಕೆಲಸವಿರದ ದಿನಗಳಲ್ಲಿ ಗ್ರಾಮದಲ್ಲಿ ಮನೆಗೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ.


'ಇಳಿ ವಯಸ್ಸಿನಲ್ಲೂ ಕಷ್ಟಪಟ್ಟು ಕೆಲಸ ಮಾಡುವ ಯಲ್ಲಮ್ಮ ಇತರರಿಗೆ ಮಾದರಿಯಾಗಿದ್ದಾರೆ. ಯಾವುದೇ ಸಮಸ್ಯೆಗಳಿದ್ದರೂ ಕೆಲಸದ ವಿಷಯದಲ್ಲಿ ರಿಯಾಯಿತಿ ಕೇಳಿದ ಉದಾಹರಣೆಗಳಿಲ್ಲ' –: ರಾಜೇಂದ್ರ ಕುಮಾರ್, ನರೇಗಾ ತಾಲೂಕು ಐಇಸಿ ಸಿರವಾರ 'ತನ್ನವರು ಎಂದು ಯಾರೂ ಇಲ್ಲದಿದ್ದರೂ ದುಡಿದು ಸ್ವಾವಲಂಬಿ ಬದುಕು ಸಾಗಿಸುತ್ತಿರುವ ಯಲ್ಲಮ್ಮ ಅವರದ್ದು ಮಾದರಿ ಜೀವನ' –: ರಮೇಶ ಶಾಖಾಪೂರು, ಸಹ ಕೂಲಿಕಾರ

# ಸಿಂಧನೂರಿಗೆ ಜೈನ ಆಚಾರ್ಯ ಶ್ರೀ ವಿಮಲ್ ಸಾಗರ್ ಸುರೇಶ್ವರಜಿ ಮಹಾರಾಜ್ ಅವರ ಭವ್ಯ ಆಗಮನ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು : ಜೈನ ಸಮಾಜದ ಪ್ರಸಿದ್ದ ಜೈನ ಮುನಿಗಳಾದ ಪರಮಪೂಜ್ಯ ಆಚಾರ್ಯ ಭಗವಂತ ಶ್ರೀ ಅವರು ವಿಶೇಷ ಧಾರ್ಮಿಕ ಕಾರ್ಯಕ್ರಮಕ್ಕಾಗಿ ಮೇ 29ರಂದು ಪಟ್ಟಣಕ್ಕೆ ಜೈನ ಆಚಾರ್ಯ ಶ್ರೀ ವಿಮಲ್ ಸಾಗರ್ ಸುರೇಶ್ವರಜಿ ಮಹಾರಾಜ್ ಆಗಮಿಸಲಿದ್ದಾರೆ ಎಂದು ಶ್ರೀ ಕುಂಥುನಾಥ ಜೈನ ಶ್ವೇತಾಂಬರ ಮೂರ್ತಿ ಪೂಜಕ ಸಂಘದ ಅಧ್ಯಕ್ಷ ಲಾಲಚಂದ್ ಜೈನ್ ತಿಳಿಸಿದ್ದಾರೆ.**

ಬುಧವಾರ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಸಮಾಜದ ಪ್ರಸಿದ್ದ ಜೈನ ಮುನಿಗಳಾದ ಪರಮಪೂಜ್ಯ ಆಚಾರ್ಯ ಶ್ರೀ ವಿಮಲ್ ಸಾಗರ್ ಸುರೇಶ್ವರಜಿ ಮಹಾರಾಜ್ ಸಾಹೇಬರು ಈಗಾಗಲೇ




ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ವಿಶೇಷ ಪ್ರವಚನ ಮತ್ತು ವಿವಿಧ ಧಾರ್ಮಿಕ ಕಾರ್ಯಕ್ರಮಗಳ ನಿಮಿತ್ತ ಪ್ರವಾಸ ಕೈಗೊಂಡಿದ್ದಾರೆ ಎಂದರು.

ಮೇ 28ರಂದು ಕಾರಟಗಿ ಮಾರ್ಗವಾಗಿ ಗೊರೆಬಾಳ್ ಗ್ರಾಮದಲ್ಲಿರುವ ಮಠದಲ್ಲಿ ವಾಸ್ತವ್ಯ ಮಾಡಲಿದ್ದು, ಮೇ 29ರಂದು ಬೆಳಗ್ಗೆ 7 ಗಂಟೆಗೆ ನಗರದ ಐಬಿ ಹತ್ತಿರ ಆಗಮಿಸಲಿದ್ದಾರೆ. ಬಳಿಕ ಭವ್ಯ ಮೆರವಣಿಗೆಯೊಂದಿಗೆ ರಾಯಚೂರು ರಸ್ತೆ ಹಾಗೂ ಭಗವಾನ್ ಮಹಾವೀರ ರಸ್ತೆ ಮಾರ್ಗವಾಗಿ ಜೈನ ದೇವಸ್ಥಾನಕ್ಕೆ ಆಗಮಿಸಿ, ಅಲ್ಲಿಂದ ಜೈನ ಕಲ್ಯಾಣ ಮಂಟಪಕ್ಕೆ ತೆರಳಲಿದ್ದಾರೆ ಎಂದು ಮಾಹಿತಿ ನೀಡಿದರು.

ನಗರದಲ್ಲಿ ನಾಲ್ಕು ದಿನಗಳ ಕಾಲ ವಾಸ್ತವ್ಯ ಹೂಡಲಿರುವ ಆಚಾರ್ಯ ಶ್ರೀಗಳವರಿಂದ ಪ್ರತಿದಿನ ಬೆಳಗ್ಗೆ 9:15ರಿಂದ 10:30ರವರೆಗೆ ವಿಶೇಷ ಪ್ರವಚನಗಳು ನಡೆಯಲಿವೆ. ಮೇ 31ರಂದು ಉತ್ತರ ಕರ್ನಾಟಕದ ವಿವಿಧ ಊರುಗಳಿಂದ ಜೈನ ಬಂಧುಗಳು ಭಾಗವಹಿಸಲಿದ್ದು, ನಾಲ್ಕು ದಿನಗಳ ವಿಶೇಷ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ವಿನಂತಿ ಈ ಸಂದರ್ಭದಲ್ಲಿ ಜೈನ ಸಮಾಜದ ಮುಖಂಡರಾದ ಶ್ರೇಣಿಕರಾಜ ಚಾಜೆಡ್, ಸಂಜಯ್ ನಹಾರ್, ರಾಜೇಂದ್ರ ಕುಮಾರ ನಹರ್, ನರೇಂದ್ರ ಸಕಲೇಚ ನವರತ್ನಲ್ ಬೋಹರಾ, ಮಾಂಗಿಲಾಲ್ ಜೈನ್ ಸುಭಾಷ್ ಸಕಲೇಚ, ಸಂಜಯ್ ಬಂಬ, ಮಹಾವೀರ್ ಜಿರಾವಲ. ವಿನೋದ್ ಲೋಡಾ ಸುಜಿತ್ ಕುಮಾರ್ ಓಸ್ವಾಲ್, ಸುರೇಶ್ ನಹಾರ್, ಶಾಂತಿಲಾಲ್ ಲೋಡಾ, ಗೌತಮ್ ಮೆಹತಾ, ಸುಂದರಲಾಲ್ ಕಟಾರಿಯಾ ಸೇರಿದಂತೆ ಇತರರು

# ಕಾರುಣ್ಯಾಶ್ರಮವು ನಮ್ಮ ನಾಡಿನಲ್ಲಿ ಅನಾಥ ಪ್ರಜ್ಞೆಯನ್ನು ಅಳಿಸಿ ಹಾಕುತ್ತಿದೆ – ಸಿದ್ದು ಹೂಗಾರ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಮ್ಮ ಸಿಂಧನೂರಿನ ಕಾರಣ್ಯಾಶ್ರಮವು ನಮ್ಮ ನಾಡಿನಲ್ಲಿ ಅನಾಥ ಪ್ರಜ್ಞೆಯನ್ನು ಅಳಿಸಿ ಹಾಕುತ್ತಿದೆ. ಅದೆಷ್ಟೋ ಸಮಾಜ ಸೇವಕರುಗಳಿಗೆ ಮತ್ತು ಯುವಕ–ರಿಗೆ ಸ್ಫೂರ್ತಿಯಾಗಿರುವ ಈ ಕಾರುಣ್ಯಾಶ್ರಮದ ಜೊತೆ ನಮ್ಮೆಲ್ಲಾ ಸ್ನೇಹ ಬಳಗ ಸದಾವಕಾಲವಿರುತ್ತದೆ.**

ನಮ್ಮ ಭಾರತೀಯ ಸಂಸ್ಕೃತಿ ಸಂಸ್ಕಾರದಲ್ಲಿ ವೃದ್ಧಾಶ್ರಮಗಳು ಹೆಚ್ಚಾದಂತೆಲ್ಲಾ ಮಾನವೀಯತೆಯಿಂದ ಮಾನವ ಧರ್ಮ ದೂರವಾಗಿದೆ ಎಂದರ್ಥ. ಸುಮಾರು ವರ್ಷಗಳಿಂದ ನಮ್ಮ ಕಲ್ಯಾಣ ಕರ್ನಾಟಕ ಭಾಗದಲ್ಲಿ ಅದೆಷ್ಟೋ ನೆಲೆ ಇಲ್ಲದ ನೊಂದ ಜೀವಿಗಳಿಗೆ ದಾನಿಗಳ ಸಹಾಯ ಸಹಕಾರದಿಂದ ಮಾಡುತ್ತಿರುವ ಈ ಕಾರುಣ್ಯಾಶ್ರಮದ ಸೇವೆ ಅರ ಗುರು ಚರಮೂರ್ತಿಗಳ ಬಸವಾದಿ ಶರಣರ ಪ್ರೀತಿಗೆ ಪಾತ್ರವಾಗಿದೆ ಎಂದು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕಾರುಣಿ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಬಿಜೆಪಿ ತಾಲೂಕ ಯುವ ಮೋರ್ಚಾ



ಉಪಾಧ್ಯಕ್ಷರಾದ ವಂಶಿಕೃಷ್ಣ ನೆಕ್ಕಂಟಿಯವರ ಜನ್ಮದಿನ ಸಮಾರಂಭ ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾದ ಸಿದ್ದು ಹೂಗಾರ ಅವರು ತಮ್ಮ ಅಭಿಪ್ರಾಯಗಳೊಂದಿಗೆ ಹಂಚಿಕೆಗಳನ್ನು ಹಂಚಿಕೊಂಡರು. ಆಶ್ರಮದಲ್ಲಿ ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷರಾದ ವಂಶಿಕೃಷ್ಣ ನೆಕ್ಕಂಟಿ ಅವರ ಜನ್ಮದಿನದ ಅಂಗವಾಗಿ ಆಶ್ರಮದಲ್ಲಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಕಾರ್ಯಕ್ರಮ ನೆರವೇರಿತು.

ಈ ಕಾರ್ಯಕ್ರಮದಲ್ಲಿ ವಂಶಿಕೃಷ್ಣ ನೆಕ್ಕಂಟಿ ಅವರನ್ನು ಆಶ್ರಮದ ವತಿಯಿಂದ ಸನ್ಮಾನಿಸಿ ಗೌರವಿಸಿ ಶುಭ ಕೋರಿದರು. ನಂತರ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ವಂಶಿಕೃಷ್ಣ ನೆಕ್ಕಂಟಿ ಅವರು ಪ್ರತಿ ವರ್ಷವೂ ಕೂಡ ತಮ್ಮ ಜನ್ಮದಿನವನ್ನು ಈ ಕರುಣೆಯ ಕಾರುಣ್ಯ ಕುಟುಂಬದಲ್ಲಿ ಆಚರಿಸುವ ಮೂಲಕ ಯುವಕರಿಗೆ ಸ್ಫೂರ್ತಿಯಾಗಿದ್ದಾರೆ. ಇಂದು ಕಾರುಣ್ಯ ಆಶ್ರಮದ ಪ್ರತಿಯೊಂದು ಸೇವಾ ಕಾರ್ಯದಲ್ಲಿ ಯುವಕರು ಈ ರೀತಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದು ಹಲವಾರು ಅಂಧ–ಅನಾಥ–'ರ ಬಾಳಿಗೆ ಬೆಳಕು ನೀಡಿದಂತಾಗುತ್ತದೆ.

ನಮ್ಮ ಈ ಸೇವೆ ಇದು ನಮ್ಮ ಮಾನವೀಯತೆಯ ಕರ್ತವ್ಯ ಎಂದು ಸಮಾಜದಲ್ಲಿನ ಹಲವಾರು ಟೀಕೆ ಟಿಪ್ಪಣಿ ಅವಮಾನ ಅಪಪ್ರಚಾರಗಳ ಮಧ್ಯೆ ಕರ್ಮ ಭೂಮಿಯ ಕರ್ಮಿಷ್ಟ ರಾಗಿ ನಾವು ಬದುಕುತ್ತಿದ್ದೇವೆ. ಈ ಕರ್ಮ ಭೂಮಿಯ ಕೂಸುಗಳಿಗೆ ಸಹಾಯ ಸಹಕಾರ ಮಾಡುವ ಪ್ರತಿಯೊಬ್ಬ ದಾನಿ ಮಹಾಶಯಗಳಿಗೆ ಭಗವಂತ ಸಕಲೇಶ್ವರ್ಯ ಸಿರಿ ಸಂಪತ್ತು ಆಯಸ್ಸು ಆಯುರಾರೋಗ್ಯ ಸುಖ ಶಾಂತಿ ನೆಮ್ಮದಿಯನ್ನು ಕರುಣಿಸಲಿ ಎನ್ನುವ ವಿಶೇಷ ಪ್ರಾರ್ಥನೆ ನಮ್ಮ ನಿತ್ಯ ನಿರಂತರ ಪ್ರಾರ್ಥನೆ ಈ ಸಂಸ್ಥೆಯನ್ನು ಕಟ್ಟುವಂತಹ ಸಂದರ್ಭದಲ್ಲಿ ಸಿದ್ದು ಹೂಗಾರ ಅವರ ನಿರಂತರ ಸಹಾಯ ಸಹಕಾರ ಈ ಸಂಸ್ಥೆಯ ಪ್ರತಿಯೊಬ್ಬ ಪದಾಧಿಕಾರಿಗಳ ಮನೆ ಮನಸ್ಸಲ್ಲಿದೆ. ನಮ್ಮ ಗೊರೆಬಾಳ ಕ್ಯಾಂಪಿನ ನೆಕ್ಕಂಟಿ ಕುಟುಂಬ ಸಮಾಜಕ್ಕೆ ಆದರ್ಶ ಕುಟುಂಬವಾಗಿದೆ ಎಂದು ಮಾತನಾಡಿ ವಂಶಿಕೃಷ್ಣ ನೆಕ್ಕಂಟಿಯವ–ರಿಗೆ ಶುಭ ಕೋರಿದರು. ಈ ಕಾರ್ಯಕ್ರಮದಲ್ಲಿ ಆಶ್ರಯದಾತರುಗಳ ಸಮ್ಮುಖದಲ್ಲಿ ಕೇಕ್ ಕತ್ತರಿಸಿ ವಂಶಿಕೃಷ್ಣ ನೆಕ್ಕಂಟಿ ಅವರು ತಮ್ಮ ಜನ್ಮದಿನವನ್ನು ಅತ್ಯಂತ ಭಾವನಾತ್ಮಕವಾಗಿ ನೆರವೇರಿಸಿಕೊಂಡರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರಘುಕುಮಾರ ಮಸ್ತಾನ್ ಕ್ಯಾಂಪ್. ಭಾಸ್ಕರ ಗೊರೆಬಾಳ ಕ್ಯಾಂಪ್. ಶ್ರೀಮಠ ಸೇವಾ ಟ್ರಸ್ಟ್‌ನ ಸದಸ್ಯರಾದ ಸುಜಾತ ಹಿರೇಮಠ. ಹಾಗೂ ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ.ಮರಿಯಪ್ಪ. ಜ್ಯೋತಿ. ಶರಣು ಸ್ವಾಮಿ ಅನೇಕರು ಉಪಸ್ಥಿತರಿದ್ದರು

## ಶಿಕ್ಷಣ ಮಾರ್ಗದರ್ಶಿ ವಿಶೇಷ

## Sewing Technology

Sewing Technology ಒಂದು ITI (Industrial Training Institute) ವ್ಯಾಪಾರಾಧಾರಿತ ಕೋರ್ಸ್ ಆಗಿದ್ದು, ಉಡುಪು ಹೊಲೆಯುವುದು, ಪ್ಯಾಟರ್ನ್ ತಯಾರಿಕೆ, ಕಟ್‌ಟಿಂಗ್, ಗಾರ್ಮೆಂಟ್ ತಯಾರಿ ಹಾಗೂ ಸೀಲಿಂಗ್ ಮಷಿನ್ ಕಾರ್ಯಾಚರಣೆ ಬಗ್ಗೆ ತರಬೇತಿ ನೀಡುತ್ತದೆ. ಈ ಕೋರ್ಸ್ NCVT/CTS ಅಡಿಯಲ್ಲಿ ನಡೆಯುತ್ತದೆ.

ಕೋರ್ಸ್ ಅವಧಿ

1 ವರ್ಷ (2 ಸೆಮಿಸ್ಟರ್)

ಅರ್ಹತೆ

ಸಾಮಾನ್ಯವಾಗಿ 8ನೇ / 10ನೇ ತರಗತಿ ಪಾಸ್

ಕೆಲವು ITIಗಳಲ್ಲಿ 12ನೇ ಪಾಸ್ ವಿದ್ಯಾರ್ಥಿಗಳಿಗೂ ಅವಕಾಶ ಇರುತ್ತದೆ.

ಕೋರ್ಸ್‌ನಲ್ಲಿ ಕಲಿಸುವ ವಿಷಯಗಳು

ಪ್ರಾಯೋಗಿಕ ತರಬೇತಿ

ಕೈ ಹೊಲಿಗೆ (Hand Stitching)

ಸೀಲಿಂಗ್ ಮಷಿನ್ ಬಳಸುವುದು

ಮಹಿಳಾ, ಪುರುಷ ಹಾಗೂ ಮಕ್ಕಳ ಉಡುಪು ಹೊಲೆಯುವುದು

ಬ್ಲೌಸ್, ಚೂಡಿದಾರ್, ಫ್ರಾಕ್, ಶರ್ಟ್, ಪ್ಯಾಂಟ್ ಹೊಲೆಯುವುದು

ಜಿಪ್, ಬಟನ್, ಕಾಲರ್ ಫಿಟ್ ಮಾಡುವುದು

ಓವರ್‌ಲಾಕ್ ಮಷಿನ್ ಬಳಕೆ

ಪ್ಯಾಟರ್ನ್ ಡ್ರಾಫ್ಟಿಂಗ್ ಮತ್ತು ಫ್ಯಾಬ್ರಿಕ್ ಕಟ್‌ಟಿಂಗ್

ತಾತ್ವಿಕ ವಿಷಯಗಳು

ಬಟ್ಟೆಗಳ ಪ್ರಕಾರಗಳು

ಹೊಲಿಗೆ ಯಂತ್ರಗಳ ಭಾಗಗಳು

ಫ್ಯಾಬ್ರಿಕ್ ಜ್ಞಾನ

ಸುರಕ್ಷತಾ ನಿಯಮಗಳು

ಗಾರ್ಮೆಂಟ್ ಕ್ವಾಲಿಟಿ ಕಂಟ್ರೋಲ್

ಸಣ್ಣ ಯಂತ್ರ ದುರಸ್ತಿ ಮತ್ತು ಮೆಂಟಿನನ್ಸ್

ಉದ್ಯೋಗಾವಕಾಶಗಳು

ಕೋರ್ಸ್ ನಂತರ

ಹೊಲಿಗೆ ಯಂತ್ರ ನಿರ್ವಾಹಕ

ಟೈಲರ್ / ಫ್ಯಾಷನ್ ಸಹಾಯಕ

ಬೊಟಿಕ್ ಸಹಾಯಕ

ಗಾರ್ಮೆಂಟ್ ಫ್ಯಾಕ್ಟರಿ ಕೆಲಸಗಾರ

ಪ್ಯಾಟರ್ನ್ ತಯಾರಕ

ಮಾದರಿ ವಿನ್ಯಾಸಕ ಸಹಾಯಕ

ಸ್ವಂತ ಟೈಲರಿಂಗ್ ಶಾಪ್ ಅಥವಾ ಬುಟಿಕ್ ಆರಂಭಿಸಬಹುದು.

ವೇತನ (Salary)

ಆರಂಭಿಕ ಸಂಬಳ: ?10,000 ? ?20,000 ಪ್ರತಿ ತಿಂಗಳು

ಅನುಭವ ಬಂದ ನಂತರ ಹೆಚ್ಚು ಆದಾಯ ಪಡೆಯಬಹುದು.


ಸ್ವಂತ ಬುಟಿಕ್ ಆರಂಭಿಸಿದರೆ ಹೆಚ್ಚಿನ ಆದಾಯ ಸಾಧ್ಯ.

ಮುಂದಿನ ಓದು (Higher StudiesITI ನಂತರ:Apprenticeship, CITS,vFashion Designing Courses, Diploma in Garment Technology, Boutique Management ಕೋರ್ಸ್ ಮಾಡಬಹುದು.

ಈ ಕೋರ್ಸ್ ಯಾರು ಮಾಡಬಹುದು? ಹೊಲಿಗೆ ಮತ್ತು ಫ್ಯಾಷನ್ ಡಿಸೈನಿಂಗ್ ಆಸಕ್ತಿ ಇರುವವರು, ಸ್ವಂತ ಉದ್ಯೋಗ ಆರಂಭಿಸಬೇಕೆಂದಿರುವವರು ಕಡಿಮೆ ಅವಧಿಯಲ್ಲಿ ಕೌಶಲ್ಯಾಧಾರಿತ ಉದ್ಯೋಗ ಬಯಸುವವರು, ಮುಖ್ಯ ಲಾಭಗಳು,ತಕಡಿಮೆ ಅವಧಿಯ ಕೋರ್ಸ್ ,ಸ್ವಯಂ ಉದ್ಯೋಗಕ್ಕೆ ಉತ್ತಮ ಅವಕಾಶ, ಮಹಿಳೆಯರು ಮತ್ತು ಪುರುಷರು ಇಬ್ಬರೂ ಮಾಡಬಹುದು ,ಭಾರತದಲ್ಲಿಯೂ ಹಾಗೂ ವಿದೇಶದಲ್ಲಿಯೂ ಉದ್ಯೋಗ ಅವಕಾಶಗಳಿವೆ.

# ರಾಜ್ಯದಲ್ಲಿ ಮುಂದಿನ 4 ದಿನ ಭಾರೀ ಮಳೆ ಮುನ್ಸೂಚನೆ, ಯೆಲ್ಲೊ ಅಲರ್ಟ್ ಘೋಷಣೆ

ನೈಜ್ಯ ದೆಸೆ ನ್ಯೂಸ್



**ಬೆಂಗಳೂರು: ನೈಋತ್ಯ ಮುಂಗಾರು ಆರಂಭಕ್ಕೂ ಮುನ್ನ ರಾಜ್ಯದಲ್ಲಿ ಉತ್ತಮ ಮಳೆಯಾಗಿದೆ. ರಾಜಧಾನಿ ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಮಳೆಯಾಗಿದ್ದು, ರಾಜ್ಯದ ಪೂರ್ವ ಭಾಗದ ಜಿಲ್ಲೆಗಳಲ್ಲಿ ಹೆಚ್ಚು ಮಳೆಯಾಗಿದೆ.**

ಮತದಾರರ ಜಾಗೃತಿ ಅಭಿಯಾನ ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ಜೂನ್ 2ರವರೆಗೂ ಮಳೆ ಮುಂದುವರೆಯಲಿದೆ. ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಇಂದು ಮತ್ತು ನಾಳೆ ಭಾರೀ ಮಳೆಯಾಗುವ ಮುನ್ಸೂಚನೆಗಳಿದ್ದು, ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಣೆ ಮಾಡಿದ್ದು, ಮೇ 29 ಮತ್ತು 30ರಂದು ಯೆಲ್ಲೊ ಅಲರ್ಟ್ ನೀಡಿದೆ. ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಇಂದಿನಿಂದ ಮೇ 30ರವರೆಗೆ ನಾಲ್ಕು ದಿನಗಳ ಕಾಲ ಯೆಲ್ಲೋ ಅಲರ್ಟ್ ನೀಡಿದೆ. ಮೇ 30ರ ನಂತರ ಮಳೆಯ ತೀವ್ರತೆ ಕಡಿಮೆಯಾದರೂ ಚದುರಿದಂತೆ ಅಲ್ಲಲ್ಲಿ ಮಳೆ ಮುಂದುವರೆಯಲಿದೆ.ಮುಂಗಾರು ಆರಂಭಕ್ಕೆ ಪೂರಕವಾದ ವಾತಾವರಣಗಳು ಸೃಷ್ಟಿಯಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಹಲವೆಡೆ ಉತ್ತಮ ಮಳೆಯಾಗುತ್ತಿದೆ.

ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಪ್ರಕಾರ ರಾಜ್ಯಾದ್ಯಂತ ಮಳೆ ಮುಂದುವರೆಯಲಿದೆ. ಭಾಗಶಃ ಮೋಡ ಕವಿದ ವಾತಾವರಣ ಕಂಡುಬರಲಿದ್ದು, ಸಂಜೆ ಹಾಗೂ ರಾತ್ರಿ ವೇಳೆ ಕೆಲವೆಡೆ ಗುಡುಗು, ಮಿಂಚು ಸಹಿತ ಜೋರಾದ ಗಾಳಿಯೊಂದಿಗೆ ಮಳೆಯಾಗಲಿದೆ. ಹಗುರದಿಂದ ಸಾಧಾರಣ ಮಳೆಯಾಗುವ ಮುನ್ಸೂಚನೆಗಳು ಹೆಚ್ಚಾಗಿದ್ದು, ಉತ್ತರ ಹಾಗೂ ದಕ್ಷಿಣ ಒಳನಾಡಿನ ಕೆಲವೆಡೆ ಆಲಿಕಲ್ಲು ಸಹಿತ ಮಳೆಯಾಗುವ ಸಾಧ್ಯತೆಗಳಿವೆ. ಆದರೆ, ಕರಾವಳಿ ಹಾಗೂ ಮಲೆನಾಡು ಭಾಗದ ಜಿಲ್ಲೆಗಳಿಗೆ ಭಾರಿ ಮಳೆ ಮುನ್ಸೂಚನೆಗಳಿಲ್ಲ. ವಾಡಿಕೆ ಪ್ರಮಾಣದ ಮಳೆಯಾಗುವ ಲಕ್ಷಣಗಳಿವೆ.

ನಿನ್ನೆ ಸಂಜೆ ಹಾಗೂ ರಾತ್ರಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ಉತ್ತಮ ಮಳೆಯಾಗಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಸೊಂಗನಹಳ್ಳಿಯಲ್ಲಿ 96 ಮಿ.ಮೀ. ನಷ್ಟು ಭಾರೀ ಮಳೆಯಾಗಿದೆ. ಕಲಬುರಗಿ, ಬೀದರ್, ಹಾಸನ, ತುಮಕೂರು, ಯಾದಗಿರಿ, ಕೋಲಾರ, ಬೆಂಗಳೂರು ನಗರ, ಉತ್ತರ ಕನ್ನಡ ಜಿಲ್ಲೆಗಳ ಹಲವೆಡೆ ಉತ್ತಮ ಮಳೆಯಾಗಿದೆ.

ಉಣಥಿ & ಏಠಿಥಿಚಿಟ ಉಣಾಜಞ ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳು ಬಿರುಸುಗೊಂಡಿವೆ. ಆದರೆ, ಬೇಸಿಗೆ ಬೆಳೆಯ ರಾಗಿ, ಬತ್ತ ಕೊಯ್ಲಿಗೆ ಮಳೆಯಿಂದ ತೊಂದರೆಯಾಗಿದೆ. ಹಲವೆಡೆ ಆಲಿಕಲ್ಲು ಸಹಿತ ಗಾಳಿ ಮಳೆಗೆ ಮಾವು,ಬಾಳೆ, ಟೊಮಾಟೋ ಸೇರಿದಂತೆ ಹಲವು ಬೆಳೆಗಳು ಹಾನಿಗೀಡಾಗಿವೆ.

# ಇನ್ನೂ ಗುಟ್ಟು ಬಿಟ್ಟುಕೊಡದ ಸಿಎಂ ಸಿದ್ದರಾಮಯ್ಯ

ನೈಜ್ಯ ದೆಸೆ ನ್ಯೂಸ್



**ಬೆಂಗಳೂರು: ದೆಹಲಿಯಲ್ಲಿ ವರಿಷ್ಠ ನಾಯಕರ ಜೊತೆಗಿನ ಚರ್ಚೆ ಮತ್ತು ಇತರ ಬೆಳವಣಿಗೆಗಳ ಬಗ್ಗೆ ನಾಳೆ ಮಾತನಾಡುವುದಾಗಿ ಹೇಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತೆ ಗೌಪ್ಯತೆ ಕಾಪಾಡಿ ಕೊಂಡಿದ್ದಾರೆ.**

ದೇಶದ ಮೊದಲ ಪ್ರಧಾನಿ ಜವಾಹಾರ್‌ಲಾಲ್ ನೆಹರೂ ಅವರ 62ನೇ ಪುಣ್ಯಸರಣೆ ಅಂಗವಾಗಿ ವಿಧಾನಸೌಧದ ಆವರಣದಲ್ಲಿದ್ದ ನೆಹರೂ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಸುದ್ದಿಗಾರರ ಜೊತೆಗೆ ಮಾತನಾಡಿದರು. ದೆಹಲಿಯಲ್ಲಿ ನಿನ್ನೆ ನಡೆದಂತಹ ಮ್ಯಾರಥ–ಾನ್ ಸಭೆಯ ಬಗ್ಗೆ ಪ್ರಶ್ನೆ ಎದುರಾದಾಗ, ನಾಳೆ ಮಾತನಾಡುವುದಾಗಿ ಚುಟುಕಾಗಿ ಉತ್ತರಿಸಿ ನಿರ್ಗಮಿಸಿದರು.ದೆಹಲಿ ಭೇಟಿ ಬಳಿಕ ರಾಜ್ಯದಲ್ಲಿ ಮಹತ್ವದ ಬೆಳವಣಿಗೆಗಳಾಗುತ್ತಿವೆ ಎಂಬ ಬಗ್ಗೆ ಯಾವುದೇ ಉತ್ತರ ನೀಡದೇ ತಮ ಪಾಡಿಗೆ ತಾವು ತೆರಳಿದರು.

ಇದಕ್ಕೂ ಮುನ್ನ ಮಾತನಾಡಿದ ಸಿದ್ದರಾಮಯ್ಯ ಅವರು, ಜವಾಹಾರ್‌ಲಾಲ್ ನೆಹರೂ ಅವರನ್ನು ಕೊಂಡಾಡಿದರು. ಸ್ವಾತಂತ್ರ್ಯ ಭಾರತದ ಮೊದಲ ಪ್ರಧಾನಿಯಾಗಿ ನೆಹರೂ ಅತ್ಯುತ್ತಮ ಸೇವೆ ಸಲ್ಲಿಸಿದ್ದರು. 17 ವರ್ಷಗಳ ಕಾಲ ಪ್ರಧಾನಿಯಾಗಿ ದೇಶದ ಜನರ ಸೇವೆ ಸಲ್ಲಿಸಿದ್ದಾರೆ. 1964ರ ಮೇ ತಿಂಗಳಿನಲ್ಲಿ ನಿಧನರಾದರು. ಅವರ ಪುಣ್ಯಸರಣೆಯನ್ನು ದೇಶಾದ್ಯಂತ ಆಚರಿಸಲಾಗುತ್ತದೆ. ಕಾಂಗ್ರೆಸ್ ಪಕ್ಷ ವಿಶೇಷವಾಗಿ ನೆಹರೂ ಅವರ ಸರಣೆ ಕೈಗೊಂಡಿದೆ. ನಮ ಸರ್ಕಾರ ಕೂಡ ನೆಹರೂ ಅವರಿಗೆ ಗೌರವ ಸೂಚಿಸುತ್ತಿದೆ ಎಂದು ಹೇಳಿದರು.

ಆಧುನಿಕ ಭಾರತದ ನಿರ್ಮಾಣದಲ್ಲಿ ನೆಹರೂ ಅವರ ಪಾತ್ರ ದೊಡ್ಡದು. ಅವರು ಸೋಷಿಯಲಿಸ್ಟ್ ಮತ್ತು ಕ್ಯಾಪಿಟಲ್‌ಲಿಸ್ಟ್ ನಡುವಿನ ಮಿಶ್ರ ಆರ್ಥಿಕತೆಗೆ ಒತ್ತು ನೀಡಿದ್ದರು. ದೊಡ್ಡದೊಡ್ಡ ಉದ್ಯಮಗಳ ಸ್ಥಾಪನೆ, ಆಣೆಕಟ್ಟುಗಳ ನಿರ್ಮಾಣ ಮಾಡಿದ್ದರು. ಶಿಕ್ಷಣ, ಸಹಕಾರ ಕ್ಷೇತ್ರದಲ್ಲಿ ಅಮೂಲಾಗ್ರ ಬದಲಾವಣೆಯನ್ನು ತಂದರು ಎಂದರು. ದೇಶದ ಜನರಲ್ಲಿ ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ ಬೆಳೆಯಲು ನೆಹರೂ ಅವರು ಕಾರಣ. ಪಂಚವಾರ್ಷಿಕ ಯೋಜನೆ ರೂಪಿಸಿ ದೇಶದ ಪ್ರಗತಿಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಅವರು ಹಾಕಿಕೊಟ್ಟ ದಾರಿಯಲ್ಲೇ ನಾವು ನಡೆಯುತ್ತಿದ್ದು, ಅವರ ಆದ–ರ್ಶಗಳು ನಮಗೆ ಮೇಲ್ಪಂಕ್ತಿಯಾಗಿವೆ ಎಂದು ಹೇಳಿದರು.ನೆಹರೂ ಅವರ ಆತಕ್ಕೆ ಚಿರಶಾಂತಿ ಸಿಗಲಿ ಎಂದು ಇದೇ ವೇಳೆ ಪ್ರಾರ್ಥಿಸಿದರು.

# ದೆಹಲಿಯಲ್ಲಿ ನಾಯಕತ್ವ ಬದಲಾವಣೆ ಕುರಿತು ಚರ್ಚೆ ಆಗಿಲ್ಲ : ಸಚಿವ ಎಂ.ಬಿ.ಪಾಟೀಲ್

ನೈಜ್ಯ ದೆಸೆ ನ್ಯೂಸ್




**ಬೆಂಗಳೂರು: ದೆಹಲಿಯಲ್ಲಿ ಹೈಕಮಾಂಡ್ ನಾಯಕರು ಸಿಎಂ ಸಿದ್ದರಾಮಯ್ಯನವರ ಜೊತೆಗೆ ರಾಜ್ಯಸಭೆ ಹಾಗೂ ವಿಧಾನಪ–ರಿಷತ್ ಚುನಾವಣೆಯ ಅಭ್ಯರ್ಥಿಗಳ ಆಯ್ಕೆಯ ಬಗ್ಗೆ ಚರ್ಚೆ ನಡೆಸಿದೆ. ಉಳಿದಂತೆ ನಾಯಕತ್ವ ಬದಲಾವಣೆ ಹಾಗೂ ಇತರ ಎಲ್ಲಾ ವಿಚಾರಗಳು ಕೇವಲ ವದಂತಿ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.**

ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ಎಐಸಿಸಿಯ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್ ಮತ್ತು ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಸಭೆಯ ಬಳಿಕ, ಹೇಳಿಕೆ ನೀಡಿ ಸ್ಪಷ್ಟನೆ ನೀಡಿದ್ದಾರೆ. ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಮಾತ್ರ ಚರ್ಚೆ ಮಾಡಿದ್ದೇವೆ. ಬೇರೆ ಯಾವ ವಿಚಾರ ಚರ್ಚೆ ಮಾಡಿಲ್ಲ ಎಂದಿದ್ದಾರೆ. ಅದೇ ಅಧಿಕೃತ ಮತ್ತು ಅಂತಿಮ ಎಂದರು.

ಸಿದ್ದರಾಮಯ್ಯ ಅವರ ರಾಜೀನಾಮೆ ಕೇವಲ ಊಹಾಪೋಹ ಮಾತ್ರ. ಸುರ್ಜೇವಾಲ ಅವರು ರಾಜ್ಯಕ್ಕೆ ಯಾವ ಕಾರಣ–ಕ್ಕೆ ಆಗಮಿಸುತ್ತಿದ್ದಾರೆ ಎಂದು ಗೊತ್ತಿಲ್ಲ. ಪಕ್ಷದ ಉಸ್ತುವಾರಿ ನಾಯಕರಾಗಿರುವ ಅವರು, ರಾಜ್ಯಕ್ಕೆ ಭೇಟಿ ನೀಡುವುದರಲ್ಲಿ ವಿಶೇಷ ಏನೂ ಇರುವುದಿಲ್ಲ ಎಂದರು.

# ನಾಳೆ ಸಿದ್ದರಾಮಯ್ಯ ರಾಜೀನಾಮೆ..? ಡಿಕೆಶಿಗೆ ಸಿಎಂ ಪಟ್ಟ ಫಿಕ್ಸ್..?

ನೈಜ್ಯ ದೆಸೆ ನ್ಯೂಸ್



**ಬೆಳವಣಿಗೆಯ ವೇಳಾ ಪಟ್ಟಿ**

***ಸಿಎಂ ಸಿದ್ದರಾಮಯ್ಯ ನಾಳೆ ಬೆಳಗ್ಗೆ 9 ಗಂಟೆಗೆ ತಮ ಅಧಿಕೃತ ನಿವಾಸ ಕಾವೇರಿಯಲ್ಲಿ ಉಪಾಹಾರ ಕೂಟ ಆಯೋಜಿಸಿದ್ದು, ಎಲ್ಲಾ ಸಚಿವ–ರಿಗೂ ಆಗಮಿಸುವಂತೆ ಆಹ್ವಾನ ನೀಡಿದ್ದಾರೆ.**

***ಬೆಳಗ್ಗೆ 10.30ಕ್ಕೆ ಲೋಕಭವನಕ್ಕೆ ತೆರಳಿ ರಾಜ್ಯಪಾಲ ಥಾವರ್‌ಚಂದ್ ಗೆಲ್ಹೋಟ್ ಅವರನ್ನು ಭೇಟಿ ಮಾಡಲು ಸಿದ್ದರಾಮಯ್ಯ ಅವರು ಸಮಯ ಕೇಳಿದ್ದಾರೆ.**

***ಬಹುತೇಕ ಇದನ್ನು ರಾಜೀನಾಮೆ ನೀಡಲು ಎಂದು ವಿಶ್ಲೇಷಿಸಲಾಗಿದೆ. ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಕಾಂಗ್ರೆಸ್ ಶಾಸಕಾಂಗ ಸಭೆ ನಡೆಯಲಿದೆ. ಅಲ್ಲಿ ನೂತನ ಮುಖ್ಯಮಂತ್ರಿ ಆಯ್ಕೆ ಸಾಧ್ಯತೆ ಇದೆ. ಸಿಎಂ ಆಗಿ ಡಿ.ಕೆ.ಶಿಕುಮಾರ್ ಶನಿವಾರ ಅಥವಾ ಭಾನುವಾರ ಕಂಠೀರವ ಕ್ರೀಡಾಂಗಣದಲ್ಲಿ ಪ್ರಮಾಣವಚನ.**

ಬೆಂಗಳೂರು, ಮೇ 27– ಮುಖ್ಯಮಂತ್ರಿ ಸಿದ್ದರಾಮಯ್ಯ ಪದತ್ಯಾಗ ಖಚಿತವಾಗುತ್ತಿದ್ದಂತೆ, ರಾಜಕೀಯ ಚಟುವಟಿ–ಕೆಗಳು ಮತ್ತಷ್ಟು ಗರಿಗೆದರಿವೆ. ಸಿದ್ದರಾಮಯ್ಯ ಅವರ ರಾಜೀನಾಮೆ, ಮುಂದಿನ ಮುಖ್ಯಮಂತ್ರಿ ಆಯ್ಕೆ ಹಾಗೂ ಪಕ್ಷದ ಸಾರಥ್ಯ ಬದಲಾವಣೆ ಕುರಿತು ಮಹತ್ವದ ಚರ್ಚೆಗಳು ಶುರುವಾಗಿವೆ. ಡಿ.ಕೆ.ಶಿವಕುಮಾರ್ ಮುಂದಿನ ಮುಖ್ಯಮಂತ್ರಿ ಎಂದು ಖಚಿತವಾಗುತ್ತಿದ್ದರೂ, ಪರ್ಯಾಯ ಆಯ್ಕೆ ಮತ್ತು ಸಾಧ್ಯತೆಗಳ ಬಗ್ಗೆ ಸಿದ್ದರಾಮಯ್ಯ ಅವರ ಆಪ್ತರು ಕೊನೆ ಕ್ಷಣದ ಕಸರತ್ತು ನಡೆಸುತ್ತಿದ್ದಾರೆ. ಈವರೆಗಿನ ಖಚಿತ ಮಾಹಿತಿ ಪ್ರಕಾರ ನಾಳೆ ಅಥವಾ ನಾಡಿದ್ದು ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದು, ಸತೀಶ್ ಜಾರಕಿಹೊಳಿ ಕೆಪಿಸಿಸಿ ಅಧ್ಯಕ್ಷರಾಗುವ ಸಾಧ್ಯತೆ ದಟ್ಟವಾಗಿದೆ.

ದೆಹಲಿಯ ಭೇಟಿ ಬಳಿಕ, ನಿನ್ನೆ ತಡ ರಾತ್ರಿ ಯಿಂದಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅಪ್ತರ ಜೊತೆ ನಿರಂತರವಾಗಿ ಸಮಾಲೋಚನೆಯಲ್ಲಿ ತೊಡಗಿದ್ದಾರೆ. ಇಂದು ಬೆಳಗ್ಗೆ ನೆಪ ಮಾತ್ರಕ್ಕೆ ನೆಹರೂ ಪುಣ್ಯಸರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮತ್ತೆ ಮನೆಗೆ ಮರಳಿದರು. ಅಲ್ಲಿ ಆಪ್ತ ಸಚಿವರು, ಶಾಸಕರು, ಪ್ರಮುಖ ನಾಯಕರ ಜೊತೆ ಕ್ಷಣಕ್ಷಣದ ಬೆಳವಣಿಗೆಗಳ ಬಗ್ಗೆ ಚರ್ಚೆ ನಡೆಸಿ ಕಾರ್ಯತಂತ್ರ ರೂಪಿಸುತ್ತಿದ್ದಾರೆ. ಸಿದ್ದರಾಮಯ್ಯ ನಿರ್ಗಮನದ ಸುಳಿವು ದೊರೆಯುತ್ತಿದ್ದಂತೆ ಆಪ್ತರ ದಂಡೇ ಆಗಮಿಸಿ ರಾಜೀನಾಮೆ ನೀಡದಂತೆ ಒತ್ತಡ ಹೇರಲಾರಂಭಿಸಿತ್ತು. ಒಂದು ವೇಳೆ ರಾಜೀನಾಮೆ ನೀಡುವ ಅನಿವಾರ್ಯತೆ ಎದುರಾದರೆ, ಡಿ.ಕೆ.ಶಿವಕುಮಾರ್ ಅವರನ್ನು ಹೊರತು ಪಡಿಸಿ ಪರ್ಯಾಯ ನಾಯಕರಿಗೆ ಮಣೆ ಹಾಕುವಂತೆ ಆಪ್ತರು, ನಾಯಕರು ಆಗ್ರಹಿಸಿದ್ದಾರೆ.

ಮೂಲಗಳ ಪ್ರಕಾರ ನಿನ್ನೆ ದೆಹಲಿಯಲ್ಲಿ ನಡೆದ 7 ಗಂಟೆಗಳ ಮ್ಯಾರಾಥಾನ್ ಸಭೆಯಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರ ಸೂಚನೆ ಮೇರೆಗೆ ಸಿದ್ದರಾಮಯ್ಯ ಪದತ್ಯಾಗಕ್ಕೆ ಒಲ್ಲದ ಮನಸ್ಸಿನಿಂದಲೇ ಸಮತಿ ಸೂಚಿಸಿ ಬಂದಿದ್ದಾರೆ ಎನ್ನಲಾಗಿದೆ. ಚರ್ಚೆಯ ವೇಳೆಯಲ್ಲಿ ಸಿದ್ದರಾಮಯ್ಯ ಅವರಿಗೆ ರಾಜ್ಯಸಭೆ ಸ್ಥಾನದ ಜೊತೆಗೆ ಪುತ್ರ ವಿಜಯೇಂದ್ರನಿಗೆ ಉಪಮುಖ್ಯಮಂತ್ರಿ ಹುದ್ದೆ ನೀಡುವ ಇಂಗಿ–ತವನ್ನು ಹೈಕಮಾಂಡ್ ವ್ಯಕ್ತಪಡಿಸಿದೆ. ಒಟ್ಟು ನಾಲ್ಕು ಉಪಮುಖ್ಯಮಂತ್ರಿ ಪೈಕಿ ಅಲ್ಪಸಂಖ್ಯಾತ ಸಮುದಾಯದ ಜಮೀರ್ ಅಹಮದ್‌ಖಾನ್, ಖರ್ಗೆ ಅವರ ಪುತ್ರ ಪ್ರಿಯಾಂಕ್ ಖರ್ಗೆ, ಲಿಂಗಾಯಿತ ಸಮುದಾಯದ ಎಂ.ಬಿ.ಪಾಟೀಲ್ ಅವರು ಅವಕಾಶ ಪಡೆಯಲಿದ್ದಾರೆ ಎಂದು ಹೇಳಲಾಗುತ್ತಿದೆ.

ಆದರೆ ಇದನ್ನು ಸಿದ್ದರಾಮಯ್ಯ ಅವರ ಆಪ್ತ ಬಣ ಒಪ್ಪಲು ತಯಾರಿಲ್ಲ. ಯಾವುದೇ ಕಾರಣಕ್ಕೂ ರಾಜೀನಾಮೆ ಕೊಡಬೇಡಿ, ಶಾಸಕಾಂಗ ಸಭೆಯಲ್ಲಿ ಬಲಾಬಲ ಪ್ರದರ್ಶನವಾಗಲಿ, ಶಾಸಕರ ಅಭಿಪ್ರಾಯ ಆಧರಿಸಿ ಮುಂದಿನ ಮುಖ್ಯಮಂತ್ರಿ ಆಯ್ಕೆಯಾಗಲಿ ಎಂದು ಪಟ್ಟು ಹಿಡಿದಿದ್ದಾರೆ. ಇದು ಯಾವ ರೀತಿಯ ತಿರುವು ಪಡೆಯಲಿದೆ ಎಂಬ ಕುತೂಹಲ ಕೆರಳಿದೆ. ಸಿದ್ದರಾಮಯ್ಯ ಅವರು ಹೈಕಮಾಂಡ್ ಜೊತೆ ಸಮಾಲೋಚನೆ ಬಳಿಕ ನೇರವಾಗಿ ತಡರಾತ್ರಿಯೇ ಬೆಂಗಳೂರಿಗೆ ಆಗಮಿಸಿದ್ದಾರೆ. ಆದರೆ, ಡಿ.ಕೆ.ಶಿವಕುಮಾರ್ ಇನ್ನೂ ದೆಹಲಿಯಲ್ಲೇ ಉಳಿದಿದ್ದು, ವರಿಷ್ಠರನ್ನು ಭೇಟಿ ಮಾಡಿ ಕುರ್ಚಿ ಗಟ್ಟಿಮಾಡಿಕೊಂಡ ನಂತರವೇ ಮರಳಲಿದ್ದಾರೆ ಎಂದು ಹೇಳಲಾಗುತ್ತಿದೆ. ಸಿದ್ದರಾಮಯ್ಯ ಅವರ ನಿರ್ಗಮನದ ಬಳಿಕ ಪರಿಶಿಷ್ಟ ಸಮುದಾಯಕ್ಕೆ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಒತ್ತಡಗಳು ಕೇಳಿ ಬರುತ್ತಿವೆ.

**ಸಚಿವರ ಉಪಾಹಾರ ಕೂಟ:** ನಾಳೆ ಬೆಳಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧಿಕೃತ ನಿವಾಸ ಕಾವೇರಿಯಲ್ಲಿ ಉಪಾಹಾರ ಕೂಟಕ್ಕೆ ಆಗಮಿಸುವಂತೆ ಎಲ್ಲಾ ಸಚಿವ–ರಿಗೂ ಮುಖ್ಯಮಂತ್ರಿ ಕಚೇರಿಯಿಂದ ಸಂದೇಶ ರವಾನೆಯಾಗಿದೆ. ಡಿ.ಕೆ.ಶಿವಕುಮಾರ್ ಅವರು ದೆಹಲಿಯಿಂದ ನೇರವಾಗಿ ಉಪಾಹಾರ ಕೂಟಕ್ಕೆ ಆಗಮಿಸುತ್ತಾರೆ ಎಂದು ತಿಳಿದು ಬಂದಿದೆ.

**ನಾಳೆ ಶಾಸಕಾಂಗ ಸಭೆ:** ಇಂದು ಸಂಜೆ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ನಾಯಕ ರಣದೀಪ್‌ಸಿಂಗ್ ಸುರ್ಜೇವಾಲ ಬೆಂಗಳೂರಿಗೆ ಆಗಮಿಸಲಿದ್ದು, ಸಚಿವರು, ಶಾಸಕರ ಜೊತೆ ಚರ್ಚೆ ನಡೆಸಲಿದ್ದಾರೆ. ನಾಳೆ ಅಥವಾ ನಾಡಿದ್ದು ಶಾಸಕಾಂಗ ಸಭೆ ನಡೆಯಲಿದೆ. ಅಲ್ಲಿ ನೂತನ ಮುಖ್ಯಮಂತ್ರಿಯ ಆಯ್ಕೆಯಾಗುತ್ತದೆ ಎಂದು ಮೂಲಗಳು ತಿಳಿಸಿವೆ. ಶಾಸಕಾಂಗ ಸಭೆಯಲ್ಲಿ ಅಧಿಕೃತವಾಗಿ ಸಿದ್ದರಾಮಯ್ಯ ರಾಜೀನಾಮೆಯನ್ನು ಪ್ರಕಟಿಸಲಿದ್ದಾರೆ. ಹೈಕಮಾಂಡ್ ಮುಂದಿನ ಶಾಸಕಾಂಗ ನಾಯಕನ ಹೆಸರನ್ನು ಸೂಚ್ಯವಾಗಿ ಮಾಹಿತಿ ನೀಡಲಿದೆ. ಶಾಸಕಾಂಗ ಸಭೆಯಲ್ಲಿ ಹೈಕಮಾಂಡ್ ತೀರ್ಮಾನಕ್ಕೆ ಬದ್ಧ ಎಂಬ ನಿರ್ಣಯ ಅಂಗೀಕರಿಸುವ ಸಾಧ್ಯತೆ ಇದೆ.

**ಎಂ.ಬಿ.ಪಾಟೀಲ್ ಅಪಸ್ವರ:** ಈ ನಡುವೆ ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್, ನಾಯಕತ್ವ ಬದಲಾವಣೆ ಎಂಬುದು ಕೇವಲ ವದಂತಿ, ಮುಖ್ಯಮಂತ್ರಿ ಬದಲಾವಣೆ ಇಲ್ಲ ಎಂದಿದ್ದಾರೆ.

**ಕೊನೆ ಪ್ರಯತ್ನ:** ಮೂಲಗಳ ಪ್ರಕಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತರ ಒತ್ತಡಕ್ಕೆ ಮಣಿಯುತ್ತಿಲ್ಲ, ಹೈಕಮಾಂಡ್‌ಗೆ ಕೊಟ್ಟ ಮಾತಿಗೆ ಬದ್ಧನಾಗಿರುತ್ತೇನೆ. ರಾಜ್ಯಪಾಲರನ್ನು ಭೇಟಿ ಮಾಡಿ ನಾಳೆ ರಾಜೀನಾಮೆ ನೀಡುತ್ತೇನೆಂದು ಹೇಳಿದ್ದಾರೆ ಎಂದು ತಿಳಿಸಲಾಗಿದೆ. ಕೊನೆಯ ಪ್ರಯತ್ನವಾಗಿ ಸಿದ್ದರಾಮಯ್ಯ ಅಪ್ತರು ಸಾಮಾಜಿಕ ನ್ಯಾಯ, ಅಹಿಂದ ಮತಗಳ ಕ್ರೊಢೀಕರಣ ಮತ್ತು ರಾಜ್ಯದ ಆರ್ಥಿಕ ಪರಿಸ್ಥಿತಿ ನಿಭಾಯಿಸುವ ಸಾಮರ್ಥ್ಯ ಸೇರಿದಂತೆ ಗಂಭೀರ ವಿಚಾರಗಳನ್ನು ಪ್ರಸ್ತಾಪಿಸಿ ಹೈಕಮಾಂಡ್ ಮನವೊಲಿಸುವ ಪ್ರಯತ್ನ ನಡೆಸುತ್ತಿದ್ದಾರೆ. 2023ರ ಮೇ ನಲ್ಲಿ ಆಗಿದ್ದ ಒಪ್ಪಂದಂತೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವಯಂ ಪ್ರೇ–ರಿತವಾಗಿ ಅಧಿಕಾರ ತ್ಯಾಗಕ್ಕೆ ಮುಂದಾಗಿದ್ದಾರೆ. ಇದರಲ್ಲಿ ಯಾರ ಒತ್ತಡವೂ ಇಲ್ಲ ಎಂದು ಹೇಳುವ ಮೂಲಕ ಕಾಂಗ್ರೆಸ್ ಪಕ್ಷ ಅಹಿಂದ ವರ್ಗದ ಅಸಹನೆಯನ್ನು ತಣಿಸುವ ಪ್ರಯತ್ನ ಮಾಡುತ್ತಿದೆ.

**ಪಕ್ಷದ ಸಾರಥ್ಯ ಬದಲಾವಣೆ:** ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ನೀಡಿ,ಡಿ.ಕೆ.ಶಿವಕುಮಾರ್ ಅವರಿಗೆ ಪಟ್ಟಾಭಿಷೇಕವಾದ ಬಳಿಕ, ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಡಿ.ಕೆ.ಶಿವಕುಮಾರ್ ರಾಜೀನಾಮೆ ನೀಡಲಿದ್ದಾರೆ ಎಂದು ಹೇಳಲಾಗಿದೆ. ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಸಿದ್ದರಾಮಯ್ಯ ಅವರ ಬಣದ ಆಪ್ತ ಸತೀಶ್ ಜಾರಕಿಹೊಳಿ ಪ್ರತಿಷ್ಠಾಪನೆಗೊಳ್ಳಲಿದ್ದಾರೆ. ಎಂ.ಬಿ.ಪಾಟೀಲ್, ಈಶ್ವರ್ ಖಂಡ್ರೆ ಅವರ ಹೆಸರುಗಳು ಚಾಲ್ತಿಯಲ್ಲಿವೆ. ಇತ್ತೀಚಿನವರೆಗೂ ಪಕ್ಷದ ನಾಯಕತ್ವ ಡಿ.ಕೆ.ಶಿವಕುಮಾರ್ ಅವರ ಸ್ವಾಧೀನದಲ್ಲಿತ್ತು. ಸರ್ಕಾರದ ಚುಕ್ಕಾಣಿ ಸಿದ್ದರಾಮಯ್ಯ ಅವರ ಬಳಿ ಇತ್ತು. ನಿನ್ನೆಯ ಬೆಳವಣಿಗೆ ಬಳಿಕ ಇದು ಅದಲು ಬದಲಾಗುವ ಸಾಧ್ಯತೆ ಇದೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101